23

# ಅಚಲ

ದ್ವೈಮಾಸಿಕ ಜುಲೈ-1994





ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು.

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನೈದು ರೂಪಾಯಿಗಳನ್ನು ಎಂ. ಓ/ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚೆಕ್ ಮೂಲಕ ಹಣ ಕಳಿಸುವವರು 20/ರೂ. ಗಳಿಗೆ ಕಳಿಸಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.



ಚಂದಾ ವಿವರ :

| | | | |
|---|---|---|---|
| ವಾರ್ಷಿಕ ಚಂದಾ | : | ರೂ. | 15–00 |
| ಅಜೀವ ಚಂದಾ | : | ರೂ. | 150–00 |
| ಚೆಕ್ ಮೂಲಕ | : | ರೂ. | 160–00 |
| ಸಂಸ್ಥೆಗಳಿಗೆ | : | ರೂ. | 200–00 |
| ಬಿಡಿ ಪ್ರತಿ | : | ರೂ. | 2–00 |
| ವಿಶೇಷ ಪ್ರತಿ | : | ರೂ. | 3–50 |

Printed at Janashakthi Printers
5th Main Road, Gandhinagar
BANGALORE-560 009

Published by: Dr. G. Ramakrishna
on behalf of Jagruthi Mahila Adhyayana
Kendra, 26, I Main Road, Vyalikaval
BANGALORE-560 003

Editor : N. Gayathri

ಪ್ರಿಯ ಚಂದಾದಾರರೇ,

ಚಂದಾ ನವೀಕರಿಸಿ, ನಿಮ್ಮ ಸ್ನೇಹವಲಯಕ್ಕೂ "ಅಚಲ" ಪರಿಚಯಿಸಿ. ಎಂ. ಓ. ಮೂಲಕ ಚಂದಾದಾರರಾಗುವವರಲ್ಲಿ ವಿಶೇಷ ವಿನಂತಿ. ಎಂ. ಓ. ಫಾರಂನಲ್ಲಿ ತಪ್ಪದೆ ನಿಮ್ಮ ವಿಳಾಸ ಬರೆಯಿರಿ. ಹೀಗೆ ವಿಳಾಸ ಬರೆಯದೆ, ಹಣ ಸಂದಾಯ ಮಾಡುವ ಪ್ರಕರಣಗಳು ಈಗ ಹೆಚ್ಚುತ್ತಿವೆ. ದಯವಿಟ್ಟು ಮರೆಯದೆ ನಿಮ್ಮ ವಿಳಾಸ ಬರೆಯಿರಿ.

**ಲೇಖನ, ಹಣ ಕಳುಹಿಸಬೇಕಾದ ವಿಳಾಸ :**
ಎನ್. ಗಾಯತ್ರಿ
ಬಿ–30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
9ನೇ ಕ್ರಾಸ್, ಒಂದನೆ ಮೇನ್, ವಿಜಯನಗರ
2ನೇ ಹಂತ, ಬೆಂಗಳೂರು–560 040

ಎಂ. ಎಸ್. ಸ್ವಾಮಿನಾಥನ್ ವರದಿಯಲ್ಲಿ ಜನಸಂಖ್ಯಾ ನೀತಿಯನ್ನು ಕುರಿತ ಪ್ರಸ್ತಾಪ, ಸಲಹೆಯಿದೆ. "ಎರಡು ಮಕ್ಕಳಿಗಿಂತ ಜಾಸ್ತಿ ಇರುವ ಮಹಿಳೆಯರು ಚುನಾವಣೆಗೆ ಅನರ್ಹರು, ಹಾಗೆಯೇ ಸಾರ್ವಜನಿಕ ಸಂಸ್ಥೆಗಳಲ್ಲಿ ಅವರಿಗೆ ಉದ್ಯೋಗ ಕೊಡಬಾರದು" ಎಂಬುದಾಗಿದೆ. ಜನಸಂಖ್ಯೆಯನ್ನು ಹೆಚ್ಚಿಸುವುದರಲ್ಲಿ ಗಂಡಸರ ಪಾತ್ರವೇ ಇಲ್ಲವೆಂಬಂತೆ ಹೇಳುವ ಈ ವರದಿ ತೀರ ಉದ್ಧಟತನದ, ಅವಿವೇಕದ ಪರಮಾವಧಿಯಿಂದ ಕೂಡಿದೆ. ಇದನ್ನು 'ಅಚಲ' ತೀವ್ರವಾಗಿ ಪ್ರತಿಭಟಿಸುತ್ತದೆ.

# ಸಂಪಾದಕೀಯ

## ಮಾನವೀಯತೆ ಧರ್ಮಕ್ಕೆ ಮತ್ತೊಂದು ಹೆಸರಾಗುವುದೇ ?

"ಮಾನವೀಯತೆ ಧರ್ಮಕ್ಕೆ ಮತ್ತೊಂದು ಹೆಸರಾಗಲಿ" ಎಂದು ಘೋಷಿಸಿದ ಬಾಂಗ್ಲಾ ಲೇಖಕಿ ತಾಸ್ಲಿಮಾ ನಸ್ರೀನಳ ವಿರುದ್ಧ ಅಮಾನವೀಯವಾದ ವರ್ತನೆಗಳು, ಅಮಾನುಷವಾದ ಪ್ರಯತ್ನಗಳು ಬಾಂಗ್ಲಾ ದೇಶದಲ್ಲಿ ಕೇಳಿಬರುತ್ತಿವೆ. ಜಗತ್ತಿನ ಹಲವಾರು ಭಾಗಗಳಲ್ಲಿ ಇದರ ಪ್ರತಿಧ್ವನಿಗಳು ಪ್ರತಿಭಟನೆಯ ಧ್ವನಿಯನ್ನು ಸೀಳಿ ಬರುತ್ತಿರುವುದು ದುರದೃಷ್ಟಕರ. ಇಡೀ ಮಾನವತೆಗೇ ಸವಾಲಾಗಿ ನಿಂತ ಈ ಪ್ರಶ್ನೆ ಪ್ರತಿಯೊಬ್ಬ ವ್ಯಕ್ತಿಯ ಅಂತಃಸತ್ವವನ್ನು ತಟ್ಟಬೇಕಾಗಿದೆ.

'ಕುರಾನ್ ಅನ್ನು ಸೇರಿಸಿದಂತೆ ಜಗತ್ತಿನ ಎಲ್ಲ ಧರ್ಮಗಳೂ ಕಾಲದಿಂದ ಕಾಲಕ್ಕೆ, ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾಗಬೇಕಾಗಿದೆ. ಎಲ್ಲ ಧರ್ಮಗಳನ್ನೂ ಅವುಗಳ ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು' ಎಂದು ಗಟ್ಟಿಯಾಗಿ ಪತ್ರಿಕಾ ಸಂದರ್ಶನವೊಂದರಲ್ಲಿ ನುಡಿದವಳು ತಾಸ್ಲಿಮಾ. ಧರ್ಮ ನಿರಪೇಕ್ಷತೆಯಲ್ಲಿ ಅಚಲವಾಗಿ ನಂಬಿಕೆ ಇಟ್ಟುಕೊಂಡಿರುವ ಈಕೆ ಮತೀಯ ಕಟ್ಟುಪಾಡುಗಳನ್ನು ಯಾರ ಮೇಲೂ ಹೇರುವ ಅಧಿಕಾರ ಸರ್ಕಾರಕ್ಕಾಗಲೀ, ಮುಲ್ಲಾಗಳಿಗಾಗಲೀ ಇಲ್ಲವೆಂದು ಸಾರ್ವಜನಿಕವಾಗಿ ಹೇಳುತ್ತಾಳೆ. ಇದಕ್ಕೆ ಬಾಂಗ್ಲಾ ದೇಶದ ಸರ್ಕಾರ ಹಾಗೂ ಅಲ್ಲಿನ ಮತಾಂಧ ಜನಸಮೂಹ ಅವಳ ತಲೆದಂಡವನ್ನು ಕೇಳುತ್ತಿದೆ. ಇನ್ನೂ ಕ್ರೂರವೆಂದರೆ ಹತ್ತು ಸಾವಿರ ಹಾವುಗಳನ್ನು ಹಿಡಿದಿಟ್ಟುಕೊಂಡು ಇವಳ ಮೇಲೆ ಬಿಟ್ಟು ಚಿತ್ರಹಿಂಸೆ ಮಾಡಿ ಆನಂದಿಸಲು ಸಾವಿರ ಹಾವಾಡಿಗರು ಕಾದು ಕುಳಿತಿದ್ದಾರೆ. ಮಾನವೀಯತೆಯ ಮಸಣದ ಮೇಲೆ ಎಂತಹ ವಿಷ ನರ್ತನ!

ಕುರಾನ್‌ನ ಬದಲಾವಣೆಗೆ ಒತ್ತಾಯಿಸಿದ್ದು ಒಂದು ಅಪರಾಧವಾದರೆ, ಹೆಣ್ಣಾದವಳೊಬ್ಬಳು ಈ ಕೃತ್ಯವೆಸಗಿದ್ದು ಮತ್ತೂ ಮಹಾಪರಾಧವಾಗಿದೆ. "ಬಾಂಗ್ಲಾದೇಶ ನನ್ನ ಅತ್ಯಂತ ಪ್ರೀತಿಪಾತ್ರವಾದ ತಾಯ್ನಾಡು. ಮೂರು ಮಿಲಿಯನ್ ಜೀವಗಳನ್ನು ಬಲಿಕೊಟ್ಟು ಪಾಕಿಸ್ಥಾನದಿಂದ ಈ ನಾಡಿನ ಸ್ವಾತಂತ್ರ್ಯ ಪಡೆದಿದ್ದೇವೆ. ಈಗ ಕೋಮುವಾದ ಮತ್ತು ಮತಾಂಧತೆಯು ನಮ್ಮ ರಾಷ್ಟ್ರವನ್ನು ಕಬಳಿಸಲು ಬಿಟ್ಟರೆ ಹಿಂದಿನ ನಮ್ಮ ತ್ಯಾಗ, ಬಲಿದಾನಗಳಿಗೆ ಅರ್ಥವೇ ಇಲ್ಲ" ಎನ್ನುವ ತಾಸ್ಲಿಮಾಳ ನೆರವಿಗೆ ಜಗತ್ತಿನ ಎಲ್ಲ ಶಾಂತಿಪ್ರಿಯರೂ, ಮನುಷ್ಯ ಪ್ರೀತಿಯುಳ್ಳವರೂ ಕೈ ನೀಡಬೇಕಾಗಿದೆ; ಮೊಂಡು ಮತಾಂಧರ ಹಲ್ಲೆಯಿಂದ ಅವಳನ್ನು ರಕ್ಷಿಸಬೇಕಾಗಿದೆ.

ಇಂದು ಬಾಂಗ್ಲಾ ದೇಶದಲ್ಲಿ ಮೂಲಭೂತವಾದಿಗಳು ಲೇಖಕಿ ತಾಸ್ಲಿಮಾರ ವಿರುದ್ಧ ಮಾತ್ರವಲ್ಲ, ಇತರ ಹಲವು ಜಾತ್ಯಾತೀತ, ಉದಾರವಾದಿ ವ್ಯಕ್ತಿಗಳ, ಸಂಘಟನೆಗಳ ವಿರುದ್ಧವೂ ನೇರ ಕಾರ್ಯಾಚರಣೆಗೆ ಇಳಿದಿದ್ದಾರೆ. ತಾಸ್ಲಿಮಾಳನ್ನು ಬೆಂಬಲಿಸಿದವರಿಗೆ, ಅವಳ ಪರವಾಗಿ ಮೆರವಣಿಗೆ ನಡೆಸಿದವರಿಗೆ ಬಹಿಷ್ಕಾರ ಹಾಕಿದ್ದಾರೆ; ಬೆದರಿಕೆ ಹುಟ್ಟಿಸಿದ್ದಾರೆ; ಕೊಲೆ ಮಾಡಲೂ ಪ್ರಯತ್ನ ಪಟ್ಟಿದ್ದಾರೆ. ಅವಳನ್ನು ಬೆಂಬಲಿಸಿ ಬರೆದ ಪತ್ರಿಕಾ ಕಚೇರಿಗಳಿಗೆ ನುಗ್ಗಿ ಲೂಟಿಮಾಡಿದ್ದಾರೆ. ತಾಸ್ಲಿಮಾಳ ಪ್ರಕರಣದ ಹಿನ್ನೆಲೆಯಲ್ಲಿ ಹಲವಾರು ಸ್ವಯಂ ಸೇವಾ ಸಂಘಟನೆಗಳು ಹಳ್ಳಿ ಪ್ರದೇಶಗಳಲ್ಲಿ ನಡೆಸುತ್ತಿರುವ ಶಿಕ್ಷಣ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯರು ಭಾಗವಹಿಸುವುದರ ವಿರುದ್ಧವೂ ಮೂಲಭೂತವಾದಿ ಶಕ್ತಿಗಳು ಚಳುವಳಿ ಪ್ರಾರಂಭಿಸಿವೆ. ಸರ್ಕಾರ ಈ ಸಂಘಟನೆಗಳು ಮಹಿಳೆಯರಿಗೆ ನೀಡುತ್ತಿರುವ ಉದ್ಯೋಗ, ಶಿಕ್ಷಣ ಕೊಡುವುದನ್ನು ನಿಷೇಧಿಸಬೇಕು ಎಂಬುದು ಬಹುಮುಖ್ಯ ಬೇಡಿಕೆ. ಇಂತಹ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರನ್ನು ಅವರ ಗಂಡಂದಿರು ಬಿಡಲು ಹಾಗೂ ಸಾಮಾಜಿಕ ಬಹಿಷ್ಕಾರ ಹಾಕಲು ಸ್ಥಳೀಯ ಮುಲ್ಲಾಗಳು 'ಫತ್‌ವಾ' (ಧಾರ್ಮಿಕ ಆಜ್ಞೆ) ಹೊರಡಿಸಿದ್ದಾರೆ. ಆದರೆ ಪ್ರಗತಿಪರ ಮಹಿಳೆಯರ ಹಾಗೂ ಮಾನವ ಹಕ್ಕು ಸಂಘಟನೆಗಳ ಚಳುವಳಿಯ ಒತ್ತಾಯದಿಂದ ಸರ್ಕಾರ ಇಂತಹ 'ಫತ್‌ವಾ'ಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಯಿತು. ಒಟ್ಟಿನಲ್ಲಿ ಸಾಮಾಜಿಕ ಸುಧಾರಣಾ ಚಳುವಳಿಯನ್ನು ಹೊಸಕಿ ಹಾಕುವ ಮೂಲಭೂತವಾದಿಗಳ ಪ್ರಯತ್ನಕ್ಕೆ 'ತಾಸ್ಲಿಮಾ' ಒಂದು ಚಿಕ್ಕ ನೆಪವಾಗುತ್ತಿದ್ದಾಳೆ!

"ನನ್ನನ್ನು ಕೊಲ್ಲಲೆಂದು ಸಿದ್ಧರಾಗಿರುವ ಮುಲ್ಲಾಗಳು ನನ್ನನ್ನಷ್ಟೇ ಅಲ್ಲ, ಬಾಂಗ್ಲಾ ದೇಶದಲ್ಲಿರುವ ಎಲ್ಲ ಪ್ರಗತಿಪರ ಮೌಲ್ಯಗಳನ್ನೂ, ಶಕ್ತಿಗಳನ್ನೂ ಕೊಲ್ಲುತ್ತಾರೆ. ನನ್ನ ಸುಂದರ ದೇಶವನ್ನು ಅವರಿಂದ ನಾನು ರಕ್ಷಿಸಬೇಕಾಗಿದೆ. ನನ್ನ ವಿಚಾರಗಳನ್ನು ಒಪ್ಪಿಕೊಳ್ಳುವವರನ್ನೂ, ಗೌರವಿಸುವವರನ್ನೂ ನನ್ನ ಈ ಹೋರಾಟಕ್ಕೆ ಬೆಂಬಲಿಸಿ ಎಂದು ಕೇಳಿಕೊಳ್ಳುವೆ" ಎನ್ನುವ ತಾಸ್ಲಿಮಾ ನಸ್ರೀನ್‌ಳಿಗೆ ಬೆಂಬಲವಾಗಿ ನಿಂತು ನಮ್ಮ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ತೋರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ನೆರೆರಾಷ್ಟ್ರದಲ್ಲಿನ ಮತಾಂಧತೆಯನ್ನು ಖಂಡಿಸುತ್ತಲೇ ನಮ್ಮ ನಾಡಿನಲ್ಲಿ ಉಲ್ಬಣಗೊಳ್ಳುತ್ತಿರುವ ಕೋಮು ವಿದ್ವೇಷವನ್ನು ಗಮನಿಸದೆ ಕಣ್ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ. ಪ್ರಬಲಗೊಳ್ಳುತ್ತಿರುವ ಕೋಮುವಾದಿ ಶಕ್ತಿಗಳು ಅಧಿಕಾರವನ್ನು ಕಸಿಯಲು ಮಾಡುತ್ತಿರುವ ಎಲ್ಲ ಹುನ್ನಾರಗಳೂ ದೇಶವನ್ನು ಬರ್ಬರ ಸಂಸ್ಕೃತಿಯತ್ತ ಕೊಂಡೊಯ್ಯುತ್ತಿದೆ. 'ದಯೆಯೇ ಧರ್ಮದ ಮೂಲವಯ್ಯ' ಎಂದ ನಾಡಿನಲ್ಲಿ ದಯೆ, ಮಾನವೀಯತೆಗಳು ತುಟ್ಟಿಯಾಗಿವೆ. ನಮ್ಮ ಕಣ್ಣ ಮುಂದಿರುವ ಮತಾಂಧ ಶಕ್ತಿಗಳನ್ನು ಖಂಡಿಸದೆ ನಾವು ವಿಶ್ವದ ಬೇರೆ ಯಾವ ಅನ್ಯಾಯಕ್ಕೆ ಪ್ರತಿಭಟಿಸುವುದೂ ವಂಚನೆಯಾಗುತ್ತದೆ.

'ಹಿಂದೂ ಮಹಿಳೆಯರೇ ಎದ್ದು ನಿಲ್ಲಿ!' ಎಂದು ಮಹಿಳೆಯರಿಗೆ ಕರೆ ನೀಡಿದ ಮೇ 7ರಂದು ನಡೆದ ಅಖಿಲ ಭಾರತ ಹಿಂದೂ ಮಹಿಳಾ ಸಮ್ಮೇಳನದ ಕಾರ್ಯಕಲಾಪಗಳು, ಉದ್ದೇಶಗಳು ಮಹಿಳೆಯರಿಗೆ ಎಚ್ಚರಿಕೆಯ ಪಾಠ ಕಲಿಸಬೇಕಾಗಿದೆ. ಈ ಸಮ್ಮೇಳನದ ಮುಖ್ಯ ಘೋಷಣೆ 'ನಾರಿ ದೇವಿಯಲ್ಲ, ದಾಸಿಯಲ್ಲ, ರಥದ ಎರಡನೇ ಗಾಲಿ' ಎಂಬುದಾಗಿತ್ತು. ಇದು ಯಾವ ರಥವೆಂಬುದನ್ನು ಯಾರೂ ಬಿಡಿಸಿ ಹೇಳಬೇಕಾಗಿಲ್ಲ. ಚರಿತ್ರೆಯುದ್ದಕ್ಕೂ ದೇವರಿಗೆ ತೃಪ್ತಿಪಡಿಸಲು ಪೂಜೆ ಮಾಡಿಸಿಕೊಂಡ ನಾರಿಯರು, ಪರದೈವವಾದ ಪತಿಗೆ ಶಯನದಲ್ಲಿ ದಾಸಿಯಾದ ನಾರಿಯರು, ಕೋಮುವಾದದ ರಥದ ಎರಡನೆಯ ಗಾಲಿಯಾಗಲು ಹೊರಟಿರುವುದು ಮಹತ್ವದ ಸಾಮಾಜಿಕ ಬದಲಾವಣೆಯೆನ್ನಬಹುದೇ ? ಹೆಣ್ಣನ್ನು ತನ್ನ ಅವಲಂಬಿತಳನ್ನಾಗಿಯೇ ಕಂಡ ಸಂಪ್ರದಾಯವಾದಿಗಳಿಗೇ ದಿಢೀರನೆ ಸಮಾನತೆ ಕೊಡುವ ದೊಡ್ಡ ಬುದ್ಧಿ ಹುಟ್ಟಿ ಕೋಮುವಾದದ ರಥದ ಎರಡನೇ ಗಾಲಿಯಾಗಲು ಅವಕಾಶ ಕೊಟ್ಟಿರುವುದು ಮಹತ್ ಕೃಪೆಯೇ ಆಗಿದೆ. ಈ ಸಮ್ಮೇಳನದಲ್ಲಿ ಹಿಂದೂ ನಾರಿಯ ಕರ್ತವ್ಯಗಳನ್ನು ಕುರಿತು ಚರ್ಚಿಸುತ್ತಾ 'ಸಂಕುಚಿತತೆ'ಯನ್ನು ಬಿಟ್ಟು ಕುಟುಂಬದಲ್ಲಿ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವುದು ನಾರಿಯರ ಕರ್ತವ್ಯ ಎಂದು ಕರೆ ಕೊಡಲಾಯಿತು. ಈ 'ಸಂಕುಚಿತತೆ'ಯನ್ನು ವ್ಯಾಖ್ಯಾನಿಸಿದ ಸಮ್ಮೇಳನದ ಸ್ವಾಗತ ಭಾಷಣ ಮಾಡಿದ ಅರುಣಾ ದಾಲ್ಮಿಯಾ 'ಪುರುಷರ ದಬ್ಬಾಳಿಕೆಯ ವಿಷಯ ಮಾತನಾಡುವುದು' ಎಂದು ಸ್ಪಷ್ಟಪಡಿಸಿದರು.

"ವಿಶ್ವದ ಬೇರೆಲ್ಲೂ ಪಡೆಯದ ಗೌರವವನ್ನು ಭಾರತದಲ್ಲಿ ಮಹಿಳೆಯರು ಪಡೆಯುತ್ತಿದ್ದಾರೆ. ಆದ್ದರಿಂದ ಕುಟುಂಬವನ್ನು ರಕ್ಷಿಸುವ ಮಹತ್ಕಾರ್ಯದಲ್ಲಿ ಕುಟುಂಬದೊಳಗಿನ ಹಿಂಸಾಚಾರವನ್ನು ಉಪೇಕ್ಷಿಸಬೇಕು, ಇಲ್ಲವೇ ಸಹಿಸಬೇಕು. ಇಲ್ಲದಿದ್ದರೆ 'ಭಾರತ ಮಾತೆ'ಯ ಪ್ರತಿಷ್ಠೆಗೆ ಕುಂದು ಬರುತ್ತದೆ" ಎನ್ನುವುದು ಸಂಸತ್ ಸದಸ್ಯೆ ಉಮಾ ಭಾರತಿಯವರ ಅಮೃತವಾಣಿಯಾದರೆ, ಭಾರತ ಮಾತೆಯನ್ನು ರಕ್ಷಿಸಲು ಮತ್ತೊಂದು ಯೋಜನೆ ನಿರ್ಮಿಸಿದವರು ವಿಶ್ವ ಹಿಂದೂ ಪರಿಷತ್ತಿನ ಅಶೋಕ್ ಸಿಂಘಾಲ್. ಭಾರತ ಮಾತೆಯನ್ನು ತನ್ನ ಮಾತೆ ಎಂದು ಮುಸ್ಲಿಮರು ಸ್ವೀಕರಿಸುವವರೆಗೂ ಹಿಂದೂ-ಮುಸಲ್ಮಾನರ ನಡುವೆ ಬಂಧುತ್ವ ಸಾಧ್ಯವಿಲ್ಲವೆಂಬ ಮಾತು ಪದೇ ಪದೇ ಹೇಳಿ 'ಹಿಂದೂ ರಾಷ್ಟ್ರ' ಕಟ್ಟಲು ಎಲ್ಲ ನಾರಿಯರೂ ಎದ್ದು ನಿಲ್ಲಬೇಕು ಎಂಬ ಅಶೋಕ್ ಸಿಂಘಾಲರ ಕರೆ ಸ್ತ್ರೀಯರನ್ನು ಧರ್ಮದ ಆಧಾರದ ಮೇಲೆ ಒಡೆಯುವ ಹುನ್ನಾರವಾಗಿತ್ತು.

ಮತಾಂಧತೆಯ ಸನ್ನಿಯು ಜನಸಮೂಹವನ್ನು ಆವರಿಸುತ್ತಿರುವ ಇಂತಹ ವಿಪತ್ಕಾಲದಲ್ಲಿ ಮಹಿಳೆಯರು ಎಚ್ಚರಾಗಬೇಕಾಗಿದೆ. ರಾಜಕೀಯ ಅಧಿಕಾರ ಗಳಿಸಲು ಮತ್ತು ಉಳಿಸಿಕೊಳ್ಳಲು ಇಂತಹ ಮೌಢ್ಯವನ್ನು ಪೋಷಿಸುವ ಎಲ್ಲ ಶಕ್ತಿಗಳ ಬಗೆಗೆ ಎಲ್ಲರೂ ಜಾಗೃತರಾಗಬೇಕಾಗಿದೆ. ದಯೆ, ಮಾನವೀಯತೆಗಳು ಮನುಷ್ಯನ ಧರ್ಮವಾಗಬೇಕಾದ ತುರ್ತು ಇಂದು ಒದಗಿ ಬಂದಿದೆ. ಈ ದಿಸೆಯತ್ತ ದುಡಿಯುವ ಎಲ್ಲ ಪ್ರಗತಿಪರ ಶಕ್ತಿಗಳೊಂದಿಗೆ ಒಂದಾಗಲು ಮಹಿಳೆಯರು ಹಿಂದೆ ಬೀಳುವುದು ಬೇಡ.

—ಎನ್. ಗಾಯತ್ರಿ

# ನಿನ್ನ ಹಿಂದಿನ ನಾನು

ಬೆಟ್ಟದ ಮೇಲಿನ ಮೃಗಗಳಿಗೆ
ಸಮುದ್ರದ ತಡಿಯ ನೊರೆ
ತೆರೆಗಳಿಗೆ
ಸಂತೆಯ ಸಂದಣಿಯ ಮಾತುಗಳಿಗೆ
ಅಂಜದೆ ಬದುಕುವ ನಡೆ.
ನುಡಿಯಗಲಿಸಿದವಳು ನೀನು,
ಅದೇಕೋ ಬದುಕಿಗೆ ಬೆನ್ನು ತಿರುಗಿಸಿ
ನಡೆದೆ !
ನಿನ್ನ ಬೆನ್ನಲ್ಲೇ ಅವತರಿಸಿದವಳು ನಾನು.
ಎದುರಾಗಿದ್ದೇನೆ ಈ ನೆರೆಗೆ.
ಸಾಗರದ ನೊರೆತೊರೆಗೆ
ಬೆಟ್ಟಕ್ಕೆ ಮಣ್ಣಿಗೆ ನೆಲ–ನೀರು–ಕತ್ತಲೆ
ಯ ನೇರ ಬದುಕಿಗೆ
ಹೀಗೆ
ನಾಡು–ಕಾಡು
ಮೃಗ–ಮನುಷ್ಯರ ನಡುವೆ
ಉಸಿರಾಡುತ್ತಿದ್ದೇನೆ.

ಭಂಡ – ಗಂಡನಿಗೆ ಬೇಸರಿಸಿದ
ನೀನೊಮ್ಮೆ ಉಟ್ಟು ಎಸೆದ
ಸೀರೆಯನ್ನೇ
ಎಷ್ಟೊಂದು ಸಡಗರದಿ ಸುತ್ತಿ
ಕೊಂಡಿದ್ದೇನೆ ಬಲ್ಲೆಯಾ ?   ಕಾಯಕ್ಕೆ
ಕತ್ತಲೆಯ ಸೆರಗಿನಾಸೆ
ಮಿಣುಗುಡುವ ನಕ್ಷತ್ರಗಳ ಹೂವುಗಳ
ನೋವುಗಳ
ತೊಟ್ಟುಕೊಂಡಿದ್ದೇನೆ.

ನೀನೊಲ್ಲದ ಗಂಡರನೇ ನೆಚ್ಚಿ
ಕೊಂಡಿದ್ದೇನೆ.
ಎಣಿಸುವಂಥ ಕೆಲಕ್ಷಣಗಳಲೇ
ಆದರೂ
ಸಂಸಾರ ಫಲ ಸರ್ವಸ್ವಸಾರ
ವುಂಡಿದ್ದೇನೆ.

● ಪ್ರೇಮ ತಾಶೀಲದಾರ

# ದೇವರ ಸಮ್ಮುಖದಲ್ಲಿ ನಾರಿಯ ಪೂಜೆ!

‘ಸ್ತ್ರೀಯರು ಎಲ್ಲಿ ಪೂಜಿಸುತ್ತಾರೋ ಅಲ್ಲಿ ದೇವತೆಗಳು ರಮಿಸುತ್ತಾರೆ’ ಎಂದ ಮನುವಿನ ನಾಡಿನಲ್ಲಿ ಸ್ತ್ರೀಯೊಬ್ಬಳ ಪೂಜೆ ನಡೆದದ್ದು ಹೀಗೆ :

ರಾಜಸ್ಥಾನದ ಗಂಗಾನಗರ ಜಿಲ್ಲೆಯ ಜೈತ್‌ಸಾರ್ ಕುಗ್ರಾಮ. ಅಂದು ಮೇ 29. ಪ್ರಕಾಶ್ ಕೌರ್ ಈ ಹಳ್ಳಿಯಲ್ಲಿ ದಿನಗೂಲಿಯಿಂದ ದುಡಿದು ಜೀವಿಸುವ ಹೆಣ್ಣು. ಆ ಹಳ್ಳಿಯ ದುರ್ಗಾಗುಡಿಯ ಅರ್ಚಕರು, ‘ಧರ್ಮಾಧಿಕಾರಿ’ ಎನಿಸಿಕೊಂಡಿರುವ ಭಾರತೀಯ ಜನತಾ ಪಕ್ಷದ ಚಂದ್ರಭನ್ ಮತ್ತು ಇನ್ನಿತರ ಧರ್ಮದ ಭಂಟರು ಸುಮಾರು 18 ರಿಂದ 20 ಮಂದಿ ಜೀಪಿನಲ್ಲಿ ಬಂದಿಳಿದು ಪ್ರಕಾಶ್‌ಕೌರ್‌ಳ ಮನೆಗೆ ನುಗ್ಗಿದರು. ಮನೆಯಲ್ಲೇ ಅವಳನ್ನು ಚೆನ್ನಾಗಿ ಥಳಿಸಿ, ದೇವಸ್ಥಾನಕ್ಕೆ ಎಳೆದುಕೊಂಡು ಬಂದು ಅಲ್ಲಿ ಮತ್ತಷ್ಟು ಬಡಿದರು. ಅವಳ ಕೂದಲು ತುಂಡಾಯಿತು, ಮುಖಕ್ಕೆ ಮಸಿ ಬಳಿಯಲಾಯಿತು. ಆ ರಾಕ್ಷಸರು ಅವಳನ್ನು ಕುರೂಪಗೊಳಿಸಿ, ಹಳ್ಳಿಯ ಬೀದಿಗಳಲ್ಲಿ ಮೆರವಣಿಗೆ ಕೊಂಡೊಯ್ದರು. ನಂತರ ಅವಳ ಕಾಲುಗಳನ್ನು ದೇವಸ್ಥಾನದ ಸುತ್ತೆಲ್ಲ ಎಳೆದಾಡಿದರು. ಅವಳ ಗುಪ್ತಾಂಗಗಳಿಗೆ ಕಡ್ಡಿ ತುರುಕಿ ಹಿಂಸಿಸಿದರು. ಹಾಹಾಕಾರದಿಂದ, ಆರ್ತಳಾಗಿ ಅವಳು ನೀರು ಕೇಳಿದಾಗ ಸೀಮೆ ಎಣ್ಣೆ ಮತ್ತು ಬಿಸಿ ನೀರನ್ನು ಅವಳ ಬಾಯಿಗೆ ಸುರಿದು ಚಿತ್ರಹಿಂಸೆ ಕೊಟ್ಟರು. ಕೊನೆಗೆ ಕೊನೆಯುಸಿರೆಳೆಯುವವರೆಗೂ ಅವಳನ್ನು ಬಡಿಯುತ್ತಲೇ ಇದ್ದರು.

ಬೆಳಿಗ್ಗೆ 11 ಗಂಟೆಗೆ ಆರಂಭವಾದ ಈ ಅಮಾನವೀಯ ಘಟನೆ ಮಧ್ಯಾಹ್ನ 3 ಗಂಟೆಯವರೆವಿಗೂ, ಅವಳು ಸಾಯುವವರೆಗೂ ನಡೆಯಿತು. ಹಾಡುಹಗಲಿನಲ್ಲಿ, ಬಹಿರಂಗವಾಗಿ, ರಾಜಾರೋಷವಾಗಿ ನಡೆದ ಈ ಕ್ರೌರ್ಯವನ್ನು ತಡೆಗಟ್ಟಲು ಯಾವ ಪೋಲಿಸ್ ಸಿಬ್ಬಂದಿಯವರೂ, ವರಿಷ್ಠರೂ ಮುಂದೆ ಬರಲಿಲ್ಲ.

ಪ್ರಕಾಶ್‌ಕೌರ್‌ಳಿಗೆ ಈ ಚಿತ್ರಹಿಂಸೆ ನೀಡಿದ ಘಟನೆಗೆ ಹಿನ್ನೆಲೆಯಿದು. ದುರ್ಗಾಗುಡಿಯಲ್ಲಿನ ದೇವರ ಆಭರಣಗಳನ್ನು ಪ್ರಕಾಶ್‌ಕೌರ್‌ಳ ಗಂಡ ಮತ್ತು ಮಗ ಕದ್ದೊಯ್ದರೆಂಬ ಆಪಾದನೆಗೆ ಬಂದಿಸಲ್ಪಟ್ಟಾಗ, ಪ್ರಕಾಶ್‌ಕೌರ್ ಪೋಲಿಸ್ ಠಾಣೆಗೆ ಹೋದಳು. ಈ ಬಂಧನ ಸುಳ್ಳು ಆಪಾದನೆಯನ್ನು ಆಧರಿಸಿದ್ದೆಂದು ಅವಳು ಪ್ರತಿಭಟಿಸಿದಳು. ಅವರ ಬಿಡುಗಡೆಗಾಗಿ ಒತ್ತಾಯಿಸಿದಳು. ಇದರಿಂದ ಸಿಟ್ಟಿಗೆದ್ದ ಆ ಪೋಲಿಸ್ ಠಾಣೆಯ ಅಡಿಷನಲ್ ಸಬ್–ಇನ್ಸ್‌ಪೆಕ್ಟರಾದ ಜಗತಾರ ಸಿಂಗ್ ಆ ಹಳ್ಳಿಯ ಜನರನ್ನು ಅವಳ ವಿರುದ್ಧ ತಿರುಗಿ ಬೀಳುವಂತೆ ಪ್ರೇರೇಪಿಸಿದರು.

ಈ ಘೋರ ಘಟನೆ ಇಡೀ ಹಳ್ಳಿಯ ಜನಸಾಮಾನ್ಯರನ್ನು ಗಾಭರಿಗೊಳಿಸಿದೆ. ಅದರಲ್ಲೂ ಹೆಣ್ಣುಮಕ್ಕಳು ಈ ಘಟನೆಯ ಭೀಕರ ಸ್ವರೂಪ ಕಂಡು ತತ್ತರಿಸುತ್ತಿದ್ದಾರೆ. ಸನಾತನ ಸಂಸ್ಕೃತಿಯ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುವ ಪಕ್ಷದ ಆಳ್ವಿಕೆಯಲ್ಲಿ, ಅದರ ಮೂಗಿನಡಿ ನಡೆಯುವ ದೌರ್ಜನ್ಯದ ತುಣುಕು ದೃಶ್ಯವಿದು ! ಆಡಳಿತ ಬಿ.ಜೆ.ಪಿ. ಸರ್ಕಾರ ಈ ಇಡೀ ಘಟನೆಯ ಬಗ್ಗೆ ಸೊಲ್ಲೆತ್ತಿಲ್ಲ. ಅಷ್ಟೇ ಅಲ್ಲ, ಗೂಲೆಗಡುಕರಲ್ಲಿ ಒಬ್ಬನಾದ ಆ ಗ್ರಾಮದ ಬಿ.ಜೆ.ಪಿ. ಅಧ್ಯಕ್ಷನನ್ನು ಇನ್ನೂ ಬಂಧಿಸಿಲ್ಲ.

ಈ ಕೃತ್ಯವನ್ನು ಖಂಡಿಸಿ ರಾಜಸ್ಥಾನದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಸುಮಿತ್ರಾ ಛೋಪ್ರಾ ಮತ್ತು ಇನ್ನಿತರ ಪದಾಧಿಕಾರಿಕಾರಿಗಳು ನಿಯೋಗವೊಂದನ್ನು ತೆಗೆದುಕೊಂಡು ಗೃಹಮಂತ್ರಿಯನ್ನು ಭೇಟಿಮಾಡಿ, ನ್ಯಾಯಕ್ಕಾಗಿ ಒತ್ತಾಯಿಸಿದ್ದಾರೆ. ಆದರೆ ಕೊಲೆಗಡುಕರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದ ಗೃಹಮಂತ್ರಿಯು ‘ಪ್ರಕಾಶ್ ಕೌರ್ ಮತ್ತು ಅವಳ ಕುಟುಂಬವು ಕುಡಿಯುವ ನೀರಿಗೆ ವಿಷ ಹಾಕುತ್ತಿದ್ದರೆಂದು, ಅದರಿಂದ ರೊಚ್ಚಿಗೆದ್ದ ಹಳ್ಳಿಯ ಜನರ ಕೃತ್ಯವಿದೆಂದು’ ವಿವರಣೆ ಕೊಟ್ಟು,

(13ನೇ ಪುಟಕ್ಕೆ)

# ಕುವೆಂಪು ಅವರು ಚಿತ್ರಿಸಿರುವ ಸುಬ್ಬಮ್ಮ : ಒಂದು ಸ್ತ್ರೀವಾದಿ ನೋಟ

● ಡಾ. ಬಿ. ಎನ್. ಸುಮಿತ್ರಾಬಾಯಿ

ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎಂಬ ಎರಡು ಕಾದಂಬರಿಗಳ ಹೆಸರುಗಳು ವಿಶಿಷ್ಟ ಸ್ತ್ರೀಯಾತ್ಮಕ ನೆಲೆಗಳನ್ನು ಧ್ವನಿಸುವಂತಿವೆ. ಹೆಣ್ಣಿನ ಪರಂಪರಾಗತ ಕೌಟುಂಬಿಕ ನೆಲೆಯನ್ನು 'ಮದುಮಗಳು' ಎಂಬ ಪದ ಸೂಚಿಸುತ್ತಿದ್ದರೆ, 'ಹೆಗ್ಗಡಿತಿ' ಎನ್ನುವುದು ಈ ರೂಢಿಗತವಾದ ಅಧೀನತೆಯ ನೆಲೆಯ ಉಲ್ಲಂಘನೆಯ, ಅಧಿಕಾರದ ನೆಲೆಯನ್ನು ಧ್ವನಿಸುವಂತಿರುವುದನ್ನು ಗಮನಿಸಬೇಕು. ಹೆಣ್ಣು ಅಧೀನತೆಯ ನೆಲೆಯಿಂದ ಅಧಿಕಾರದ ನೆಲೆಯತ್ತ ಬೆಳೆಯುವ ಪ್ರಕ್ರಿಯೆಯನ್ನು, ಅಧೀನತೆಯಿಂದ ಸಮಾನತೆಯತ್ತ ಸಾಗುವ ಪ್ರಕ್ರಿಯೆಯನ್ನೂ ಕ್ರಮವಾಗಿ ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಕಾಣಬಹುದು. ಅಧಿಕಾರದ ನೆಲೆಯ ಕಡೆಗಿನ ಸಾಂಸ್ಕೃತಿಕ ಪ್ರಕ್ರಿಯೆಯನ್ನು 'ಅಸಂಸ್ಕೃತಿ–ಕುಸಂಸ್ಕೃತಿ–ಸುಸಂಸ್ಕೃತಿ'ಗಳ ನಡುವಿನ ತಾಕಲಾಟವಾಗಿ ನೋಡುವಂಥ ನೈತಿಕದೃಷ್ಟಿ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಮುಖ್ಯವಾಗಿ ತೋರಿದರೆ, ಮಲೆಗಳಲ್ಲಿ ಮದುಮಗಳುವಿನಲ್ಲಿ ಈ ಸಂಸ್ಕೃತಿ ಜಿಜ್ಞಾಸೆಯೇ ಸಕಲ ಜೀವಜಾತಿಗಳ ಆಧ್ಯಾತ್ಮಿಕ ವಿಕಾಸದ ಅತಿ ಉನ್ನತಿಯ ಕಡೆಗಿನ ವಿಕಾಸದ ಸಾಧ್ಯತೆಯ ತತ್ವದೊಂದಿಗೆ ಬೆಸೆದುಕೊಳ್ಳುತ್ತದೆ.

ಬದುಕಿನ ತತ್ವ ಶೋಧನೆಗೆ, ಸಂಸ್ಕೃತಿಯ ಜಿಜ್ಞಾಸೆಗೆ ಸ್ತ್ರೀತ್ವವನ್ನು ಸಂಕೇತವಾಗಿಸಿ ಬಳಸುವುದು. ನವೋದಯದ ಸಾಹಿತ್ಯದಲ್ಲಿ ಎದ್ದು ತೋರುವ ಒಂದು ಲಕ್ಷಣ. ಇದಕ್ಕೆ ರಾಷ್ಟ್ರೀಯತಾವಾದದ ಚಾರಿತ್ರಿಕ ಅಂಶವೊಂದು ಹಿನ್ನೆಲೆಯಾಗಿರಲು ಸಾಧ್ಯವಿದೆ. ಐರೋಪ್ಯ ಎಂಡಾಲಜಿಸ್ಟರ ಶೋಧನೆಗಳ ಫಲವಾಗಿ ವೇದೋಪನಿಷತ್ತುಗಳ ಕಾಲದ ಆರ್ಯ ಸಂಸ್ಕೃತಿಯ ಸ್ವರ್ಣಯುಗದ ಪರಿಕಲ್ಪನೆಯೊಂದು ಹುಟ್ಟಿತ್ತು. ಅದನ್ನು ಸ್ವದೇಶಿ ವಿದ್ವಾಂಸರು, ಬುದ್ಧಿಜೀವಿಗಳು ವಿಸ್ತರಿಸಿ ಬೆಳೆಸಿದರು. ಹಿಂದೆ ಒಮ್ಮೆ ಇತ್ತೆನ್ನಲಾದ ಆ ಅತ್ಯುನ್ನತ ಸಂಸ್ಕೃತಿಗೆ ಪ್ರತೀಕಗಳಾಗಿ ಗಾರ್ಗಿ, ಮೈತ್ರೇಯಿ, ಸೀತೆ ಸಾವಿತ್ರಿ, ದಮಯಂತಿ, ದ್ರೌಪದಿ ಮುಂತಾದ ಪುರಾಣ ಸ್ತ್ರೀಯರ ಚರಿತ್ರೆಗಳನ್ನು ಮಾದರಿಯಾಗಿ ಕಲ್ಪಿಸಲಾಯಿತು. ವಸಾಹತು ಆಡಳಿತದ ಫಲವಾಗಿ ಹುಟ್ಟಿದ ಹೊಸ ಮಧ್ಯಮ ವರ್ಗದ ಜನರಿಗೆ, ಈ ಗತ ಸಂಸ್ಕೃತಿಯ, ಪರಿಕಲ್ಪನೆ ತಮ್ಮ ನಾಡಿನ, ಬದುಕಿನ ಬಗ್ಗೆ ಹೊಸ ಆತ್ಮ ವಿಶ್ವಾಸ ಬೆಳೆಸಿಕೊಳ್ಳಲು ನೆರವಾಯಿತು. ಸ್ತ್ರೀಯರನ್ನು ಆ ಕಾಲದ ನವ ಮಧ್ಯಮ ವರ್ಗದ ಪುರುಷರ ಅಗತ್ಯಗಳಿಗೆ ಹೊಂದಿಸುವಂಥ 'ಸಹಧರ್ಮಿಣಿ' 'ಕುಟುಂಬಿನಿ'ಯರ ಮಾದರಿಗಳನ್ನು ಮೇಲೆ ಹೇಳಿದ 'ಆರ್ಯ ಮಹಿಳೆ'ಯರ ಪ್ರತೀಕಗಳು ಒದಗಿಸಿದವು. ರಾಷ್ಟ್ರೀಯತಾವಾದಿ ಆಂದೋಲನದಲ್ಲಿ ನಡೆದ ಈ ಬಹುಮುಖ್ಯ ಸಾಂಸ್ಕೃತಿಕ ಪ್ರಕ್ರಿಯೆ ನವೋದಯದ ಸಾಹಿತ್ಯದ ಮೇಲೆ ದೃಢವಾದ ಪ್ರಭಾವ ಬೀರಿದೆ. ಹಳೆಯ ಮತ್ತು ಹೊಸ ಸಂಸ್ಕೃತಿಗಳ ತಾಕಲಾಟವನ್ನು ಚಿತ್ರಿಸುವಲ್ಲಿ ಮಾಸ್ತಿ ಸ್ತ್ರೀಯರ ಪಾತ್ರಗಳ ಮೂಲಕ ಈ 'ಆರ್ಯಮಹಿಳೆ'ಯರ ಬಿಂಬಗಳಿಗೆ ಜೀವ ತುಂಬುತ್ತಾರೆ.

ಕಾರಂತರ ಅಜ್ಜಿಯರು ಗತಕಾಲದ ಉತ್ತಮಿಕೆಯ ಸ್ಥಿರ ಪ್ರತೀಕಗಳಾಗಿದ್ದಾರೆ. ಹಾಗೆಯೇ ನವೋದಯದ ಅತಿಮುಖ್ಯ ಕವಿ–ದಾರ್ಶನಿಕ–ಕಾದಂಬರಿಕಾರ ಕುವೆಂಪು ಕೂಡ ಸ್ತ್ರೀತ್ವವನ್ನು ಸಂಸ್ಕೃತಿಗೆ ಸಂಕೇತವಾಗಿಸುವುದು ಆಶ್ಚರ್ಯದ ಸಂಗತಿಯಲ್ಲ. ಆದರೆ ಕುವೆಂಪು ಅವರ ಎರಡೂ ಕಾದಂಬರಿಗಳ ಒಟ್ಟು ಸ್ತ್ರೀ ಪ್ರಪಂಚವನ್ನು ಈ ದೃಷ್ಟಿಯಿಂದ ಗಮನಿಸಿದರೆ, ಆ ಲೋಕವು ಒಂದೇ ಕಾಲಕ್ಕೆ ಎರಡು ಹೊಣೆಗಳನ್ನು ನಿರ್ವಹಿಸುವುದನ್ನು ಕಾಣಬಹುದು. 1) ಕೃತಿಗಳ ಒಳಗಿನ ಸಂಸ್ಕೃತಿ–ಜಿಜ್ಞಾಸೆಗೆ ಈ ಪಾತ್ರಗಳೇ ವಸ್ತುವಾಗಿವೆ. 2) ಆ ಸಂಸ್ಕೃತಿ ಜಿಜ್ಞಾಸೆಯ ಮೂಲಕ ಹೊಮ್ಮುವ ಮೌಲ್ಯ ನಿರ್ದೇಶಗಳಿಗೆ ಈ ಪಾತ್ರಗಳೇ

ವಾಹಕವೂ ಆಗುತ್ತವೆ. ಈ ಮಾತಿಗೆ ನಿದರ್ಶನವಾಗಿ ಸುಬ್ಬಮ್ಮನ ಪಾತ್ರವನ್ನು ನೋಡಬಹುದು.

ಕುವೆಂಪು ಅವರ ಎರಡೂ ಕಾದಂಬರಿಗಳಲ್ಲಿ ಸುಬ್ಬಮ್ಮನದೇ ಅತ್ಯಂತ ಪ್ರಖರವಾದ, ಸ್ಫುಟವಾದ ಲಕ್ಷಣಗಳಿರುವ ಬಲಿಷ್ಠವೂ ಆದ ಪಾತ್ರವಾಗಿದೆ. ಪುರುಷ ಪ್ರಧಾನವಾದ ಊಳಿಗಮಾನ್ಯ ವ್ಯವಸ್ಥೆಯನ್ನು ಒಳಗೊಂಡ ಸಂಸ್ಕೃತಿಯ ಎಲ್ಲ ವಿಧವಾದ ನೇತ್ಯಾತ್ಮಕ ಅಂಶಗಳೂ ಈಕೆಯಲ್ಲಿ ಘನೀಭವಿಸುತ್ತವೆ. ಬಡತನ–ಸಿರಿತನಗಳ ಅಸಮಾನತೆಯ ವೈಪರೀತ್ಯದಿಂದ ಮಾನವೀಯತೆ ಹೇಗೆ ಕುಗ್ಗಿ ಹೋಗಬಹುದು ಅಥವಾ ಹಿಗ್ಗಬಹುದು ಎಂಬ ಪರಿಣಾಮಗಳಿಗೆ ಈಕೆ ನಿದರ್ಶನವಾಗುತ್ತಾಳೆ. ಯಜಮಾನಿಕೆ, ಊಳಿಗತನ, ಪ್ರೇಮ–ಕಾಮಗಳ ದ್ವಂದ್ವಗಳ ಅತಿರೇಕಕ್ಕೆ ಈಕೆಯಲ್ಲಿ ಮಾದರಿ ದೊರೆಯುತ್ತದೆ. ಹತ್ತಿಕ್ಕಲ್ಪಟ್ಟ ಮಾನಸಿಕ ಭಾವನೆಗಳು, ಪ್ರಾಕೃತಿಕ ಸ್ವಭಾವ, ಸ್ವಾತಂತ್ರ್ಯ, ಸ್ವಚ್ಛಂದತೆಗಳಿಂದ ಹೇಗೆ ಉಲ್ಬಣಿಸಬಹುದೆಂಬುದಕ್ಕೆ ಈಕೆ ಮಾದರಿಯಾಗಬಲ್ಲಳು. ಜೊತೆಗೆ ನವ ಶ್ರೀಮಂತಿಕೆಯ ವಿಕೃತ ರೂಪ ಗುಲಾಮರಲ್ಲಿ ವ್ಯಕ್ತವಾಗುವ ಬಗೆಗೂ ಈಕೆ ಒಂದು ಉದಾರಣೆಯಂತಿದ್ದಾಳೆ. ಇಂಥ ಹಲವು ಬಗೆಯ ದ್ವಂದ್ವಗಳ ಸಂಕೀರ್ಣತೆಗಳಿಂದ ಈಕೆಯ ವ್ಯಕ್ತಿತ್ವವನ್ನು ಕಡೆದಿರುವ ಕುವೆಂಪು ತಮ್ಮ 'ಅಸಂಸ್ಕೃತಿ–ಸುಸಂಸ್ಕೃತಿ'ಗಳ ಜಿಜ್ಞಾಸೆಗೆ ನೈತಿಕ ಮೌಲ್ಯದ ಹುಡುಗಾಟಕ್ಕೆ ಈಕೆಯನ್ನು ವಾಹಕವಾಗಿ ಬಳಸುವಂತೆ ತೋರುತ್ತದೆ. ನಿಜವಾಗಿ ಹೂವಯ್ಯನಿಗೆ ಸರಿಸಮಾನವಾಗಿ ನಿಲ್ಲುವ ಈಕೆ ಪ್ರಾರಂಭದಿಂದ ಕೊನೆಯವರೆಗೆ ಹೂವಯ್ಯ ಪ್ರತಿನಿಧಿಸುವ ಸಂಸ್ಕೃತಿಯ ಆದರ್ಶಕ್ಕೆ ಬಲವಾದ ಸವಾಲಾಗುತ್ತಾಳೆ. ಕಾನೂರು ಹೆಗ್ಗಡಿತಿ ಕಾದಂಬರಿಯೊಳಗೆ ಇವರಿಬ್ಬರಲ್ಲಿ ಪರಸ್ಪರ ಪೂರಕ ಅಂಶಗಳೇನೂ ಇಲ್ಲ. ಆದರೂ ಒಬ್ಬರ ಇರವು ಮತ್ತೊಬ್ಬರಿಗೆ ಒಂದು ಬಗೆಯ ತುಮುಲ, ತಾಕಲಾಟ, ಬಿಗಿತಗಳನ್ನು ಹುಟ್ಟಿಸಬಲ್ಲದು.

ಸರ್ವಚೇತನದ ವಿಕಾಸತತ್ವದಲ್ಲಿ ಶ್ರದ್ಧೆಯಿರುವ ಕುವೆಂಪು, ಈ ಸುಬ್ಬಮ್ಮನಲ್ಲೂ ಇರಬಹುದಾದ ಮಾನವೀಯವಾದ ಉತ್ತಮಾಂಶಗಳನ್ನು ದಾಖಲಿಸಲು ಮರೆತಿಲ್ಲ. ಇವಳ ಶಾರೀರಕ ಕಸುವು, ಚೆಲುವು, ದುಡಿವ ಸಾಮರ್ಥ್ಯ, ಚಟುವಟಿಕೆ, ಆಡಳಿತ ದಕ್ಷತೆ ಮತ್ತು ಒಳಿತಿನ ಸಾಮಿಪ್ಯದಲ್ಲಿ ಬದಲಾಗುವ ಸಾಧ್ಯತೆಗಳನ್ನು ಅವರು ಗುರುತಿಸುತ್ತಾರೆ. ಆದರೆ ಈಕೆಯ ಸುತ್ತಲೂ ಇರುವ ದಮನಕಾರಿ ವ್ಯವಸ್ಥೆಯ ಮೂಲಶಕ್ತಿಗಳು, ಅವುಗಳ ಫಲವಾಗಿ ಈಕೆಯ ಸ್ವಭಾವದಲ್ಲೂ ರೂಢವಾದ ಒರಟುತನ, ಕಟುತನ, ಇವಳನ್ನು ಹೇಗೂ ಬೆಳೆಯಗೊಡದಷ್ಟು ಪ್ರಬಲವಾಗಿವೆ ಎಂಬುದನ್ನು ಕಾದಂಬರಿ ಚಿತ್ರಿಸುತ್ತದೆ. ಈ ಬಲಿಷ್ಟ ಶಕ್ತಿಗಳ ವಿನಾಶಾತ್ಮಕ ಸೆಳೆತದಲ್ಲಿ ಸಿಕ್ಕ ಈಕೆ ಅವು ಸೆಳೆದತ್ತ ಸಾಗಿ ಕೊನೆಗೆ ಮೌಲ್ಯರಹಿತವಾದ ನಿರ್ವಾಣದ ಸ್ಥಿತಿಯಲ್ಲಿ ಸಾವನ್ನಪ್ಪುತ್ತಾಳೆ,

ಸುಬ್ಬಮ್ಮ ತನ್ನನ್ನು ಬಂಧಿಸಿಟ್ಟಿರುವ ವ್ಯವಸ್ಥೆಯ ಎದುರಲ್ಲಿ ತೀರಾ ನಿಸ್ಸಹಾಯಕಳೂ ಅಲ್ಲ. ಆದರೆ ಪ್ರತಿಭಟನೆಗಿಂತ ಪರಿಸ್ಥಿತಿಯ ಜೊತೆ ರಾಜಿ ಮಾಡಿಕೊಳ್ಳುತ್ತ, ಅವಕಾಶ ಸಿಕ್ಕಾಗ ಪ್ರಬಲವಾಗುವುದು ಈಕೆಯ ಲಕ್ಷಣ. ಚಂದ್ರಯ್ಯಗೌಡರಿಂದ ಕೊಲೆಯಾಗುವುದರಿಂದ ತಪ್ಪಿಸಿಕೊಳ್ಳಲು ತವರಿಗೆ ಓಡುವುದು, ತವರಿನವರ ಅಗತ್ಯಕ್ಕೆ ತಕ್ಕಂತೆ ಮತ್ತೆ ದುಡಿಮೆಗೆ ತನ್ನನ್ನು ತೆತ್ತುಕೊಳ್ಳುವುದರ ಮೂಲಕ ಈಕೆ ತನ್ನನ್ನು ಹಿಡಿದಿಟ್ಟಿರುವ ಬಂಧನಗಳನ್ನು ಮೀರಲು ಯತ್ನಿಸುತ್ತಾಳೆ. ಈ ಯತ್ನ ಈಕೆ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟ ಮಾತ್ರ. ಈ ಹೋರಾಟದಲ್ಲಿ ಈಕೆ ಶಕ್ತಿಗುಂದಿದ ಚಂದ್ರಯ್ಯಗೌಡರನ್ನು ಸೇವೆ, ಪ್ರೀತಿಗಳಿಂದ ಗೆದ್ದುಕೊಳ್ಳುತ್ತಾಳೆ. ಆತನ ಮರಣದ ನಂತರ, ಅದೇ ಗದ್ದುಗೆಗೆ ತಾನು ಏರಿ ದಕ್ಷ ಹೆಗ್ಗಡಿತಿಯೆನಿಸಿ ಮೆರೆಯುತ್ತಾಳೆ.

ಆದರೆ ಸುಬ್ಬಮ್ಮನ ಈ ಅಧಿಕಾರದತ್ತ ಸಾಗುವ ಗೆಲವು ಕೇವಲ ಹೊರಮೈಯಲ್ಲಷ್ಟೇ ಗೆಲುವೆನ್ನಬಹುದು. ಆ ಗೆಲುವಿನ ಶಕ್ತಿಯನ್ನು ಈಕೆಯ ಒಳಗೇ ಇರುವ ಅನಿಯಂತ್ರಿತ ಪ್ರವೃತ್ತಿಗಳು ಒಳಗಿಂದಲೇ ಕೊರೆದು ದುರ್ಬಲಗೊಳಿಸುತ್ತದೆ. ಸುಪ್ತ ಮನಸ್ಸಿನಲ್ಲಿ ಬೇರೂರಿದ ರೂಢಿಜನ್ಯ ಮೌಲ್ಯಗಳೂ ಈಕೆಯನ್ನು ಹಿಂದಕ್ಕೆ ಸೆಳೆಯುವಂಥವೇ. ಹೀಗೆ ಹೊರಗೆ ಈಕೆ ಯಾಜಮಾನ್ಯವನ್ನು ಗಳಿಸಿದರೂ ನಿಜವಾಗಿ 'ಯಜಮಾನಿ' ಅಲ್ಲ. ಸೇರೆಗಾರರಂಥ ಸ್ವಾರ್ಥಿ ಲಂಪಟರಿಂದ, ಗಂಗೆಯಂಥ ಶೋಷಕ–ಶೋಷಿತ ಸ್ತ್ರೀ ಕೂಡ ಈ ಸುಬ್ಬಮ್ಮನನ್ನು ಶೋಷಿಸಲು ಸಾಧ್ಯವೆಂಬಷ್ಟು ಅಸಹಾಯಕ ನೆಲೆಯಲ್ಲೇ ಆಕೆ ಉಳಿ

ದಿದ್ದಾಳೆ. ಈ ಅಂಶ ತುಂಬ ಸ್ಪಷ್ಟವಾಗುವುದು ಈಕೆಯ ಮರಣದ ಸನ್ನಿವೇಶದಲ್ಲಿ.

ಹೆಂಡತಿಯನ್ನು ಕಸವಾಗಿ ಕಂಡದ್ದಕ್ಕಾಗಿ ಕೊನೆಗಳಿಗೆಯಲ್ಲಿ ಪಶ್ಚಾತ್ತಾಪ ಪಡುವ ಚಂದ್ರಯ್ಯಗೌಡರು, ಗೌರವಯುಕ್ತವಾದ ಮರಣವನ್ನು ಕಾಣಬಹುದು. ಆದರೆ ಅದೇ ಬಗೆಯ ಬದುಕನ್ನು ಬದುಕಿದ್ದಕ್ಕಾಗಿ ಸುಬ್ಬಮ್ಮ ಅನಾಗರಿಕ ಗರ್ಭಪಾತದಿಂದ ದುರಂತವನ್ನು ಕಾಣುತ್ತಾಳೆ. ಸಾವಿನಲ್ಲೂ ಸಮಾಜದ ದೃಷ್ಟಿಯಿಂದ ಆಕೆ ಪಾರಾಗಿಲ್ಲ. ಅವಳ ಸತ್ತಸ್ಥಿತಿ ಕಂಡ ರಾಮಯ್ಯ ತಮ್ಮ ಮನೆತನಕ್ಕೆ ಮಸಿಬಳಿದಳೆಂಬ ಅಸಹ್ಯದಿಂದ ನೇಣುಹಾಕಿಕೊಂಡರೆ, ಪುಟ್ಟಣ್ಣ, ಈಕೆಯ ಸಾವಿನ ಮೂಲವಾದ ಅನೈತಿಕ ಪಿಂಡ, ರಕ್ತದ ಕಾಲುವೆ ಹೂವಯ್ಯನ ಕಣ್ಣಿಗೂ ಬೀಳಬಾರದು ಎಂದು ಗುಟ್ಟಾಗಿ ಅದನ್ನು ಶುಚಿಗೊಳಿಸುತ್ತಾನೆ. ಹೂವಯ್ಯ ಬಂದು ಕಾಣುವಾಗ ಸುಬ್ಬಮ್ಮ ಪರಿಶುದ್ಧವಾಗಿ ತೊಳೆದಿಟ್ಟ ಶವವಾಗಿರುತ್ತಾಳೆ. ಈ ಸಾವಿನಲ್ಲಿ ಈಕೆ ಒಮ್ಮೆಗಳಿಸಿದ್ದ ಜಯದ ವೀರ ನಾಯಕತ್ವವಿಲ್ಲ. ಮೌಲ್ಯವೊಂದಕ್ಕಾಗಿ ಹೋರಾಡಿ ಮಡಿದ ಹುತಾತ್ಮಕತೆಯೂ ಇಲ್ಲ. ಏಕೆ ಎಂಬ ಅಂಶ ನಿಜವಾಗಿ ಮನಸ್ಸುಳ್ಳವರನ್ನು ತಟ್ಟಬೇಕಾದ ಅಂಶವಾಗಿದೆ.

ಮಾಸ್ತಿಯವರು ಹಲವಾರು ಗಟ್ಟಿಗಿತ್ತಿ ಸ್ತ್ರೀಯರ ಇತ್ಯಾತ್ಮಕಪೆಂಬಂಥ ಬಿಂಬಗಳನ್ನು ತಾವು ಎತ್ತಿಹಿಡಿವ ಪುರಾತನ ಮೌಲ್ಯಗಳಿಗೆ ಪ್ರತೀಕವಾಗುವಂತೆ ಸೃಷ್ಟಿಸುತ್ತಾರೆ. ಕಾರಂತರೂ ಹೆಣ್ಣಿನ ಬವಣೆ, ದುಡಿಮೆಗಳನ್ನು ಗುರುತಿಸಿ ಮಾನವೀಯ ಅಂತಃಕರಣದ ನೆಲೆಯಿಂದ ಗೌರವಯುತ ಮಾದರಿಗಳಾಗುವಂತೆ ಮಾಡಬಲ್ಲರು. ಶಂಕರ ಮುಖಾಶಿಯವರ ಗಂಗವ್ವ–ಆಕಾಶಕ್ಕೆ ತಲೆಯೆತ್ತಿ ನಿಲ್ಲಬಲ್ಲಂಥ ಬೃಹತ್ ಪ್ರತೀಕವಾಗಿ, ಸ್ವಾಭಿಮಾನದ ಛಲದ, ಮಮತೆಯಂಥ ಇತ್ಯಾತ್ಮಕ ಮೌಲ್ಯಗಳಿಗೆ ಸಂಕೇತವಾಗಬಲ್ಲಳು. ಆದರೆ ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಈ ರೀತಿ ತುಂಬ ಬಲಿಷ್ಠವೆನ್ನಬಹುದಾದ ಸ್ತ್ರೀತ್ವದ ಧನಾತ್ಮಕ ಮಾದರಿ ಸಿಗುವುದೇ ಇಲ್ಲ. (ಮಲೆಗಳಲ್ಲಿ ಮದುಮಗಳ ಪೀಂಚಲು ಕೂಡ ಇಷ್ಟು ಗಟ್ಟಿಯಾಗುವುದಿಲ್ಲ.) ಅತ್ಯಂತ ಬಲಿಷ್ಠವಾದ ಸುಬ್ಬಮ್ಮನ ಪಾತ್ರ ಈ ರೀತಿ ನಕಾರಾತ್ಮಕತೆಯನ್ನು ಧ್ವನಿಸುತ್ತದೆ–ಎಂಬುದು ಸಾಂಸ್ಕೃತಿಕವಾಗಿ ಕೂಡ ಕುತೂಹಲಕಾರಿ ಸಂಗತಿ.

ಲಿಂಗಾಧಾರಿತ ಶೋಷಣೆಯನ್ನು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿವರಗಳಲ್ಲಿ ವ್ಯಂಗ್ಯದ ಒಳದನಿಯನ್ನಿಟ್ಟು ಪ್ರತಿಪಾದಿಸುವ ವಿಷಯದಲ್ಲಿ ಕುವೆಂಪು ಕಾದಂಬರಿಗಳು ಅನನ್ಯವೆನ್ನುವಂತಿವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿನ ಶೋಷಿತ ಸ್ತ್ರೀತ್ವದ ನೆಲೆಗಳನ್ನು ತಲೆಕೆಳಗಾದ ಪಿರಮಿಡ್ಡಿನ ರೀತಿ ನಾವು ಕಲ್ಪಿಸಬಹುದಾದರೆ ಈ ಪಿರಮಿಡ್ಡಿನ ಅತ್ಯಂತ ತಳದ ಕೇಂದ್ರ ಬಿಂದುವಿನಲ್ಲಿ ಸಮಾಜದ ಅತ್ಯಂತ ಕೆಳಜಾತಿ ಸ್ತ್ರೀಯರಾದ ತಿಮ್ಮಿ, ಪೀಂಚಲು, ಅಕ್ಕಣಿ, ಸೇರಿ, ಕಾಡಿಯಂಥವರು ನಿಲ್ಲುತ್ತಾರೆ. ತಮ್ಮ ದುಡಿಮೆ, ವ್ಯಕ್ತಿತ್ವಗಳೆರಡರಿಂದಲೂ ಇತರರನ್ನು ಬೆಳೆಸಿರುವವರಾದ ಇವರು ಸದಾ ಅಸ್ಥಿರವಾದ ಆರ್ಥಿಕ ನೆಲೆಯಿಂದಾಗಿ, ಲೈಂಗಿಕವಾಗಿ ಬಲಿಪಶುವಾಗುವ ಸಾಧ್ಯತೆಯ ಅಂಚಿನಲ್ಲೇ ಇರುವವರು. ಇವರ ಭುಜಗಳ ಮೇಲೆ ನಿಲ್ಲುವ ನಾಗತ್ತೆ, ಜಟ್ಟಮ್ಮ, ಲಕ್ಷಮ್ಮ, ಕಾವೇರಿ ಮುಂತಾದವರು ಸ್ವತಃ ಶೋಷಿತರಾದರೂ, ತಮ್ಮ ಹೆಣ್ಣುತನದ ಬಂಡವಾಳದಿಂದ ಪುರುಷರನ್ನು ತಮ್ಮ ಹಿಡಿತದಲ್ಲಿ ಇರಿಸುತ್ತಾ, ಆ ಹೊಸ ಅಧಿಕಾರದ ನೆಲೆಯಿಂದ ಇತರ ದುರ್ಬಲ ಸ್ತ್ರೀಯರನ್ನು ಶೋಷಿಸುವವರು. ಇವರಿಗಿಂತ ಕೊಂಚ ಮೇಲೆ–ಕಾಗಿನೂರಿನ ಅಮ್ಮ ದಾನಮ್ಮ ಹೆಗ್ಗಡಿತಿ, ದೇವಮ್ಮ ಗೌರಮ್ಮ ಮುಂತಾದ ಹಳ್ಳಿಯ ಸಿರಿವಂತ ಮನೆತನಗಳ ಮಧ್ಯಮ ಜಾತಿಯ ಸ್ತ್ರೀಯರಿದ್ದಾರೆ. ಇವರು ವಾತ್ಸಲ್ಯದಿಂದ; ಸಿರಿತನದಿಂದ ಇತರರಿಗಿಂತ ಭಿನ್ನರಾದರೂ ಪಿತೃಪ್ರಧಾನ ವ್ಯವಸ್ಥೆಯನ್ನೇ ರಕ್ತಗತವಾಗಿಸಿಕೊಂಡವರೇ ಆಗಿದ್ದಾರೆ. ಇವರೆಲ್ಲರಿಗಿಂತ ಭಿನ್ನಸ್ತರದಲ್ಲಿ, ಸ್ತ್ರೀ–ಪುರುಷರ ಸಮಾನತೆಯ ನೆಲೆಗಳತ್ತ ಸಾಗಬಲ್ಲ ಸಾಧ್ಯತೆಗಳು ಸೀತೆ, ಚಿನ್ನಮ್ಮರಂಥ ಪಾತ್ರಗಳಮೂಲಕ ಕುವೆಂಪು ಸೂಚಿಸುತ್ತಾರೆನಿಸುತ್ತದೆ. ಪೀಂಚಲುವನ್ನು ವಿಕಸಿತ ಸ್ತ್ರೀತ್ವದ ತುಂಬ ಆರೋಗ್ಯಕರ ಮಾದರಿಯಾಗಿ ಚಿತ್ರಿಸಿ, ಆಕೆಯನ್ನು ಚಿನ್ನಮ್ಮನಿಗೆ ಮಾದರಿ, ಮಾರ್ಗದರ್ಶನದಂತೆ ಕಲ್ಪಿಸಿರುವುದು–ಕುವೆಂಪು ಕಾಣಿಸಲೆತ್ನಿಸುವ 'ಸಮಾನತೆ' ಆಧಾರಿತ ಸಂಸ್ಕೃತಿಯತ್ತ ಸೂಚನೆ ನೀಡುವಂತಿದೆ. ಆದರೂ ಈ ಯಾವೊಂದು ಪಾತ್ರವೂ ಸುಬ್ಬಮ್ಮನೊಂದಿಗೆ ಪ್ರತಿದ್ವಂದ್ವಿಯಾಗಿ ನಿಲ್ಲಲಾರದು ಎಂಬುದು ಗಮನಿಸಬೇಕಾದ ಸಂಗತಿ.

●

## ವ್ಯಕ್ತಿಚಿತ್ರ

# ಸ್ತ್ರೀ ವಿಮೋಚನೆಯ ಗಟ್ಟಿ ದನಿ - ಜಾರ್ಜ್ ಸ್ಯಾಂಡ್

● ನೇಮಿಚಂದ್ರ

1975ರಲ್ಲಿ ಪ್ರಕಟಿತವಾದ ಮಹಿಳಾ ಸಾಧನೆಗಳನ್ನು ಕುರಿತ ಗಿನ್ನೀಸ್ ಪುಸ್ತಕದಲ್ಲಿ ಜಾರ್ಜ್ ಸ್ಯಾಂಡ್ ಬಗ್ಗೆ ಎರಡು ಸಾಲುಗಳಿದ್ದವು. 'ಕುಪ್ರಸಿದ್ಧ ಜಾರ್ಜ್ ಸ್ಯಾಂಡ್‌ಳದು ಬಿಡೆಯಿಲ್ಲದ, ಕ್ರಮವಿಲ್ಲದ ಅವ್ಯವಸ್ಥೆಯ ಅಭಿವ್ಯಕ್ತಿ. ಗಂಡು ಉಡುಗೆಯತ್ತಲ ತನ್ನ ಒಲವು ಮತ್ತು ವಿವಾಹದ ನಂತರದ ಪ್ರೇಮ ಪ್ರಕರಣಗಳ ಸರಮಾಲೆಯಿಂದ ತನ್ನ ಕಾಲದಲ್ಲಿಯೇ ಸಾಕಷ್ಟು ಸುದ್ದಿ ಮಾಡಿದ ಲೇಖಕಿ, ಜಾರ್ಜ್ ಸ್ಯಾಂಡ್.'

ಇಷ್ಟೇ ಆಕೆಯ ಕುರಿತು ಇದ್ದ ಮಾಹಿತಿ. ಯಾರೀಕೆ ? ಗಂಡು ಉಡುಗೆ ತೊಟ್ಟವಳು, 190 ವರ್ಷಗಳ ಹಿಂದೆ ಹುಟ್ಟಿ ಬಿಡೆ ಇಲ್ಲದೆ ಬದುಕಿದವಳು. ಅವಳ ಬದುಕಿಗೆ, ನಡತೆಗೆ ಕಾರಣವಿದ್ದೀತಲ್ಲ. ಈ ಎರಡು ಸಾಲುಗಳು ಒಬ್ಬ ಮಹಾನ್ ಲೇಖಕಿಗೆ, ಸ್ತ್ರೀ ವಿಮೋಚನೆಯ ಸ್ವರವೆತ್ತಿದ ಮುಂಚೂಣಿಯ ಮಹಿಳೆಗೆ, ಉಸಿರುಕಟ್ಟಿಸಿದ ವಿವಾಹದಲ್ಲಿ ಸಿಲುಕಿ ಚಡಪಡಿಸಿದ ದುರಂತ ಹೆಣ್ಣಿಗೆ, ಅಸಮಾನ ನೀತಿ ರೀತಿಗಳ ಸಮಾಜದಲ್ಲಿ ಬಹಳಷ್ಟನ್ನು ಕಳೆದುಕೊಂಡು ಸಾಂಪ್ರದಾಯಿಕ ವಿವಾಹವನ್ನು ನಿರಾಕರಿಸಿದ ದಿಟ್ಟೆಗೆ ಯಾವ ರೀತಿಯ ನ್ಯಾಯ ಒದಗಿಸಿಯಾವು ?

ಜಾರ್ಜ್ ಸ್ಯಾಂಡ್ ಫ್ರಾನ್ಸ್ ದೇಶದ ಲೇಖಕಿ, ಆಕೆಯ ನಿಜ ನಾಮಧೇಯ ಅರ್ಮದೀನ್ ಅರೋರ್ ಲೂಸೀ ದ್ಯೂಪಾ ಎಂದು. ಈಕೆ ಮಾರ್ಷಲ್ ದ ಸಾಕ್ಸೆಯ ವಿವಾಹದ ಹೊರಗೆ ಹುಟ್ಟಿದ ಮಗಳು. ಬ್ಯಾರೋನ್ ದ್ಯುದೇವಾನ್‌ನ ಪತ್ನಿ.

'ಇಂಡಿಯಾನ' 1832ರಲ್ಲಿ ಜಾರ್ಜ್ ಸ್ಯಾಂಡ್ ಬರೆದ ಕಾದಂಬರಿ. ಉಸಿರುಕಟ್ಟಿಸಿದ ವಿವಾಹದಿಂದ ಹೆಣ್ಣೊಬ್ಬಳು ಹೊರ ಜಿಗಿದು ತಪ್ಪಿಸಿಕೊಳ್ಳುವ ಕತೆ ಇದು. ತನ್ನ ನಿಜವಾದ ಪ್ರಿಯಕರನೊಡನೆ ದೂರದ ದ್ವೀಪದಲ್ಲಿ ಬದುಕು ಆರಂಭಿಸಲು ಹೊರಟ ನಾಯಕಿ—ಜಾರ್ಜ್ ಸ್ಯಾಂಡ್ ತನ್ನ ಕಾದಂಬರಿಯಲ್ಲಿ ಸೃಷ್ಟಿಸಿದ ಪಾತ್ರ.

ಶತಮಾನಗಳಿಂದ ಮೂಡಿ ಬಂದಿದ್ದ ಮಹಿಳೆಯ ಅವಲಂಬಿತ ಸ್ಥಿತಿಯನ್ನು, ಗೃಹೀತ ಗುಲಾಮಗಿರಿಯನ್ನು ಕಿತ್ತೊಗೆದು, ಸಂಪ್ರದಾಯವನ್ನು ತೊಡೆದ ಲೇಖಕಿ 28 ವರ್ಷದ ಜಾರ್ಜ್ ಸ್ಯಾಂಡ್. ತನ್ನ ಕಾಲದಿಂದ ಬಹಳಷ್ಟು ಮುಂದೋಡಿದ್ದವು ಆಕೆಯ ವಿಚಾರಗಳು. ಸ್ತ್ರೀ–ಪುರುಷರ ಸಮಾನತೆಯನ್ನು, ಮಹಿಳೆಯರಿಗೆ ಆಸ್ತಿ ಹಕ್ಕನ್ನು ವಿಚ್ಛೇದನದ ಆಯ್ಕೆಯನ್ನು ಬಲವಾಗಿ ಪ್ರತಿಪಾದಿಸಿದಾಕೆ. ಬರಹಗಾರ್ತಿಯರಲ್ಲೇ ಅಧಿಕವಾಗಿ ಬರೆದವಳು, ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದವಳು, ವಿಕ್ಟರ್ ಹ್ಯೂಗೋ ಹಾಗೂ ಬಾಲ್ಜಾಕ್‌ರನ್ನು ಬಿಟ್ಟರೆ ತನ್ನ ಕಾಲದ ಎಲ್ಲಾ ಲೇಖಕರನ್ನು ತನ್ನ ಪುಸ್ತಕಗಳ ಮಾರಾಟದಲ್ಲಿ ಹಿಂದೆ ಹಾಕಿದವಳು. ಪ್ರತಿ ದಿನ 3,00 ಕ್ಕೂ ಹೆಚ್ಚು ಪದಗಳನ್ನು ಬರೆಯುತ್ತಿದ್ದ ಈ ಬೃಹತ್ ಕತೆಗಾರ್ತಿ ಕೆಲವೊಮ್ಮೆ, ಅಗತ್ಯ ಬಿದ್ದಾಗ ತಿಂಗಳೊಂದರಲ್ಲಿ ಕಾದಂಬರಿ ಮುಗಿಸಿದ್ದೂ ಉಂಟು. ಆಕೆ ತನ್ನ ಕಾಲದ ರಮ್ಯ ಪ್ರೀತಿಯ ಕಲ್ಪನೆಯಾಗಿದ್ದಳು, ಕವಿ ಆಲ್‌ಫ್ರೆಡ್ ದ ಮ್ಯೂಸೇನ ಉತ್ಕಟ ಪ್ರೀತಿಯಾಗಿದ್ದ ಈಕೆ ಮಹಾನ್ ಸಂಗೀತಕಾರ ಫ್ರೆಡರಿಕ್ ಶೋಪಾನ್‌ನ ಪ್ರೇಯಸಿ. ಪುರುಷರು ಆಕೆಯನ್ನು ತೀವ್ರವಾಗಿ ಪ್ರೀತಿಸುತ್ತಿದ್ದರು, ಇಲ್ಲ ದ್ವೇಷಿಸುತ್ತಿದ್ದರು. ಅಭಿಮಾನದಿಂದ ಕಾಣುವರು, ಇಲ್ಲ ತಿರಸ್ಕಾರದಿಂದ ತೂಗುವರು, ಆದರೆ ಯಾರೊಬ್ಬರೂ ಆಕೆಯನ್ನು ಉಪೇಕ್ಷಿಸಲು ಸಾಧ್ಯವಿರಲಿಲ್ಲ, ಆಕೆಯ ವ್ಯಕ್ತಿತ್ವಕ್ಕೆ ಪ್ರತಿಕ್ರಿಯಿಸದೆ ಇರಲು ಅಸಾಧ್ಯವಿತ್ತು. ಇಂದು ಇತಿಹಾಸದಲ್ಲಿ ಮಹಿಳೆಯ ಸ್ವಂತ ಇಚ್ಛೆ, ಸ್ವಂತ ಚಿಂತನೆಗಳ ಹಕ್ಕನ್ನು ಪ್ರತಿಪಾದಿಸಿದ

ಸ್ವತಂತ್ರ ಮನೋಭಾವದ ಹೆಣ್ಣಿನ ಸಂಕೇತವಾಗಿ ಜಾರ್ಜ್ ಸ್ಯಾಂಡ್ ನಿಲ್ಲುತ್ತಾಳೆ.

ಜಾರ್ಜ್ ಸ್ಯಾಂಡ್ ನಾಲ್ಕು ವರ್ಷದವಳಿದ್ದಾಗ, ಆಕೆಯ ತಂದೆ ತೀರಿಕೊಂಡರು. ತಾಯಿಯಿಂದ ದೂರವಾಗಿ, ಕಟ್ಟುನಿಟ್ಟಿನ ಅಜ್ಜಿಯ ಬಳಿ ಬೆಳೆದ ಹುಡುಗಿ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳಲು ಶಕ್ತಳಾಗಿ, ತನ್ನ ಬದುಕಿನ ಹೊಣೆಯನ್ನು ಹೊರಬಲ್ಲ ಗಟ್ಟಿಗಿತ್ತಿಯಾಗಿ ಬೆಳೆದಳು. ಕಂಡದ್ದನ್ನೆಲ್ಲ ಓದುವ ಅವಳ ಹವ್ಯಾಸ, ಎಳೆಯ ಮನಸ್ಸಿನ ನೂರು ಕಲ್ಪನೆಗಳಿಗೆ ಇಂಬು ಕೊಟ್ಟಿತು. ಹೋಮರ್, ಶೇಕ್ಸ್‌ಪಿಯರ್, ಫ್ರೆಂಚ್‌ತತ್ವಜ್ಞಾನಿ ರೂಸೋ ಮತ್ತು ಮಾಂಟೇಸ್ಕ್ಯೂರ ಕೃತಿಗಳೊಡನೆ ಆ ಕಾಲದ ರಮ್ಯ ಕಾದಂಬರಿಗಳನ್ನೂ ಅರೆದು ಕುಡಿದಳು. ಕಾನ್ವೆಂಟಿನ ವಸತಿಶಾಲೆಯಲ್ಲಿ ಶಿಕ್ಷಣ ಪಡೆದಳು.

ಅಜ್ಜಿ ತೀರಿಕೊಂಡಳು. 18ನೇ ವಯಸ್ಸಿಗೆ ಕ್ಯಾಸಿಮಿರ್ ದ್ಯೂದೆವಾನ್‌ನನ್ನು ಪ್ರೀತಿಸಿ ವಿವಾಹವಾದಳು. ಆತ ಕ್ಯಾವಲ್ರಿ ಅಧಿಕಾರಿ. ಆದರೆ, ಅವರಿಬ್ಬರ ನಡುವೆ ಸಮಾನ ಆಸಕ್ತಿಗಳೇ ಇರಲಿಲ್ಲ ಎಂದು ತಿಳಿಯುವಷ್ಟರಲ್ಲಿ ಬಹಳ ತಡವಾಗಿತ್ತು. ಎಂಟು ವರ್ಷಗಳು, ಗಂಡನ ವಿವಾಹೇತರ ಲೈಂಗಿಕ ಕಸರತ್ತುಗಳಲ್ಲಿ, ತನ್ನತ್ತಲ ಅಖಂಡ ಉಪೇಕ್ಷೆಯಲ್ಲಿ ಹರಿದು ಚಿಂದಿಯಾಯಿತು ಆಕೆಯ ಬದುಕು. ವಿವಾಹ ಉಸಿರುಕಟ್ಟಿಸಿತು, ಜಾರ್ಜ್ ಸ್ಯಾಂಡ್ 1831ರಲ್ಲಿ ಗಂಡನನ್ನು ಬಿಟ್ಟು, ತನ್ನಿಬ್ಬರು ಮಕ್ಕಳೊಂದಿಗೆ ಪ್ಯಾರಿಸ್‌ಗೆ ಹೋದಳು. ಆ ಕಾಲದ ಹೆಂಗಸರಿಗೆ ತಮ್ಮಿಚ್ಛೆಯಂತೆ ಸ್ವತಂತ್ರವಾಗಿ ಎಲ್ಲಿಗೆ ಬೇಕಾದರೂ ಹೋಗಿರುವುದು ಕನಸು ಮಾತ್ರವಾಗಿತ್ತು. ಅಂದಿನ ಸರ್ಕಾರ ಮತ್ತು ಕಾನೂನುಗಳು ಗಂಡನಿಗೆ ಹೆಂಡತಿಯ ಮೇಲೆ ಸರ್ವನಿಯಂತ್ರಣ ಕೊಟ್ಟದ್ದಲ್ಲದೆ, ಆಕೆಯ ಏನೇ ಆಸ್ತಿಯ ಮೇಲೂ ಆತನನ್ನೇ ಹಕ್ಕುದಾರನಾಗಿ ಕೂಡಿಸಿತ್ತು. ಇಂಥಾ ಪರಿಸ್ಥಿತಿಯಲ್ಲಿ ಯಾವ ಹೆಣ್ಣೂ ತನ್ನ ಮನಸ್ಸಿನ ಹಾದಿ ಹಿಡಿದು ಹೋಗುವುದು ಸುಲಭವಿರಲಿಲ್ಲ, ಕಾಲಿಗೆ ತೊಡರಿದ ಅವಲಂಬನೆಯಲ್ಲಿ ಅವರ ಮಾತುಗಳು ತುಟಿಯಿಂದ ಹೊರಬೀಳುವಂತಿರಲಿಲ್ಲ.

ಆದರೆ ಇಂಥಾ ಹಿಡಿತಗಳ ಹಿಡಿತಕ್ಕೆ ಸಿಲುಕದ ಜಾರ್ಜ್, ಪ್ಯಾರೀಸಿನ ಸಾಹಿತ್ಯಿಕ ಕ್ಷೇತ್ರಕ್ಕೆ ಧುಮುಕಿದಳು. ಅದು ವಿಕ್ಟರ್ ಹ್ಯೂಗೊ, ಬಾಲ್ಜಾಕ್ ಮತ್ತು ಅಲೆಕ್ಸಾಂಡರ್ ಡ್ಯೂಮಾಸ್‌ರ ಕಾಲ. ಬದುಕುಳಿಯುವಷ್ಟು ಸಂಪಾದಿಸಬೇಕಿತ್ತು. ಬಾವಚಿತ್ರಗಳನ್ನು ಬಿಡಿಸಿ, ಲಿ ಫಿಗಾರೊ ಸಣ್ಣ ಲೇಖನಗಳನ್ನು ಬರೆದು ಹೊಟ್ಟೆ ಹೊರೆಯ ಹೊರಟಳು. ಗಂಡನಿಂದ ಬರಬೇಕಾದ ಸಣ್ಣ ಜೀವನಾಂಶವೂ ಬಾರದೆ ಈ ಯತ್ನಗಳಲ್ಲಿ ಬದುಕುವುದು ಸುಲಭವಿರಲಿಲ್ಲ.

ಜಾರ್ಜ್ ಸ್ಯಾಂಡ್ ಪುರುಷರ ಉಡುಪು ಧರಿಸುತ್ತಿದ್ದಳು. ಮಾರು ಮಾರು ಉದ್ದಕ್ಕೆ ಹರಿದು ನೆಲ ಗುಡಿಸುತ್ತಾ ಚಿಮ್ಮಿನಿಂತ ನೂರು ನೆರಿಗೆಯ ಹೆಂಗಸರ ಉಡುಪು ಅವರ ಚುಟುವಟಿಕೆಗಳನ್ನೆಲ್ಲ ನಿರ್ಬಂಧಿಸಿತ್ತು. ದೈನಂದಿಕ ಕೆಲಸಗಳೂ ಕಷ್ಟ ಸಾಧ್ಯವಾಗುತ್ತಿದ್ದವು. ಮಹಿಳೆಯರ ಈ ಪರಿಯ ಉಡುಗೆ ಅವರ ಬಂಧಿಸಿತ್ತು, ಬಾಧಕವಿತ್ತು, ಅನಾನುಕೂಲವಿತ್ತು. ಅಸುರಕ್ಷಿತವಿತ್ತು. ಪ್ಯಾರೀಸಿನ ಬೀದಿ ಬೀದಿಗಳಲ್ಲಿ ಸ್ವತಂತ್ರವಾಗಿ ಹೊರಟ ಜಾರ್ಜ್ ಸ್ಯಾಂಡ್‌ಗೆ, ಗಂಡಸರ ಉಡುಗೆ ಆರಾಮದ್ದು, ಅನುಕೂಲದ್ದು ಎನಿಸಿದ್ದರೆ ಆಶ್ಚರ್ಯವೇನು. ಗಂಡಸರಂತೆ ಉಡುಪು ಧರಿಸುವ, ಸಾರ್ವಜನಿಕವಾಗಿ ಸಿಗಾರ್ ಹಚ್ಚುವ, ಈಕೆ ಅಲ್ಲಿಯ ಸಂಪ್ರದಾಯ ಸಮಾಜವನ್ನು ಬೆಚ್ಚಿ ಬೀಳಿಸಿದಳು. ಜೊತೆಗೆ ಲೇಖಕ ಜೂಲ್ ಸಾಂದೋನೊಡನೆ ಪ್ರೇಮ ಪ್ರಕರಣ ಕಿಚ್ಚು ಹಚ್ಚುವಂತಿತ್ತು. ಆಕೆಯ ಹುಸಿ ಹೆಸರು ಈತನ ಹೆಸರಿನಿಂದ ಹುಟ್ಟು ಪಡೆಯಿತು. ಆತನೊಡನೆ ದಿನಪತ್ರಿಕೆಗಳಿಗೆ ಲೇಖನಗಳನ್ನು, ಒಂದು ಕಾದಂಬರಿಯನ್ನು ಬರೆದಳು.

ವಿಪರ್ಯಾಸವೆಂದರೆ, ಜಾರ್ಜ್ ಸ್ಯಾಂಡಿನ ಸ್ವಂತಂತ್ರ ಬದುಕಿನ ಸ್ತ್ರೀವಾದಿ ಚಿತ್ರ ಈ ಕಡು ಬಡತನದ ದಿನಗಳಿಂದಲೇ ಆರಂಭವಾಗುತ್ತದೆ. ಈಕೆಗೆ ನಾಟಕಗಳೆಂದರೆ ಬಲು ಪ್ರಿಯ. ಆದರೆ ಮಹಿಳೆಯರು ಕುಳಿತುಕೊಳ್ಳಲು ಏರ್ಪಡಿಸಿದ್ದ ಬಾಕ್ಸ್ ಅತಿ ದುಬಾರಿಯದು. ಅಷ್ಟು ಹಣವಿಲ್ಲದ ಜಾರ್ಜ್ ಸ್ಯಾಂಡ್ ಪುರುಷರು ಎರಡೂವರೆ ಫ್ರಾಂಕುಗಳಿಗೆ ನಿಂತು ನೋಡುವ ವಿಭಾಗಕ್ಕೆ ಹೋಗಿ ನಿಲ್ಲುತ್ತಿದ್ದಳು. ಕೂದಲನ್ನು ದೊಡ್ಡ ಟೊಪ್ಪಿಯಡಿ ಮುದುರಿಟ್ಟು, ಮೇಲು ಕೋಟು, ಇಜಾರ ಧರಿಸಿ, ಸಿಗಾರ್ ಹೊತ್ತಿಸಿ ಹೊರಟ ಹೆಣ್ಣು ಗಂಡಸರ ಹೊಗೆ ತುಂಬಿದ ಕುಳಿಗೆ ನುಗ್ಗಿ ಹೋದ ಮೊದಲ ಗಟ್ಟಿಗಿತ್ತಿ.

ಆಕೆಯ ಆರ್ಥಿಕ ದುಸ್ಥಿತಿ ಅವಳ ಕಾದಂಬರಿ 'ಇಂಡಿಯಾನ'ದ ಜನಪ್ರಿಯತೆಯಿಂದ ನೀಗಿ

ಹೋಯಿತು. 'ಮಾನವ ಮನಸ್ಸಿನ ಒಳ ಬಗೆದ ಇಂಥಾ ಇಣುಕು ನೋಟ ಮತ್ತೆಲ್ಲೂ ಕಂಡದ್ದಿಲ್ಲ' ಎಂದು ಪುಸ್ತಕದ ಕುರಿತ ವಿಮರ್ಶೆಗಳು ಕೂಗಿದವು. ಮೊಟ್ಟ ಮೊದಲ ಗೆಲುವಿನ ಹೊಂಬೆಳಕು. 'ಮೇಡವ್ ದ್ಯೂದೆವಾನ್ ಸತ್ತಿದ್ದಾಳೆ' ಖುಷಿ ಪಟ್ಟಳು, 'ನನ್ನ ವಿಮರ್ಶಕರ ಪ್ರಕಾರ ಜಾರ್ಜ್ ಸ್ಯಾಂಡ್ ಓರ್ವ ಚುರುಕಿನ ಯುವಕ' ಎಂದು ನಕ್ಕಳು.

ಆಕೆಯ ಮೂರನೆ ಕಾದಂಬರಿ 'ಲೆಲಿಯಾ' ಮತ್ತಷ್ಟು ಪ್ರಸಿದ್ಧಿ ತಂದ ಪುಸ್ತಕ. ಓರ್ವ ಮಹಿಳೆಯ ಮನಸ್ಸಿನ ತೀವ್ರ ಪ್ರೀತಿಯ ದಾಹದ ಕತೆ. ತಾನು ಬಯಸಿದ ಪರಿಪೂರ್ಣ ಭೌತಿಕ ಹಾಗೂ ಆಧ್ಯಾತ್ಮಿಕ ಸಂಗಮ ದೊರೆಯದೆ ಕಾನ್ವೆಂಟ್ ಸೇರುವ ಹೆಂಗಸಿನ ಚಿತ್ರವಿದೆ. ಕಾದಂಬರಿ ಓದುಗರನ್ನು ಹಿಡಿದಿಟ್ಟಿತು. ಈ ಕಾದಂಬರಿಯನ್ನು ಬೈರನ್‌ನ ಮಹಾನ್ ಕೃತಿ 'ಡಾನ್ ಜಾನ್'ಗೆ ಹೋಲಿಸಿದವರೂ ಇದ್ದರು. 'ಲೆಲಿಯಾ'ದಲ್ಲಿ ಅಭಿವ್ಯಕ್ತವಾಗುವ ಪ್ರೀತಿಯ ತೀವ್ರತೆಯ ನಡುವೆ. ಮಹಿಳಾ ಹಕ್ಕುಗಳ ಪ್ರತಿಪಾದನೆಯೂ ಇತ್ತು.

ಆಕೆಯ ಸಾಹಿತ್ಯ ಸಮೃದ್ಧವಾಗಿತ್ತು. ಆಕೆಯ ಕಾದಂಬರಿಗಳಲ್ಲಿ ರೋಚಕತೆಯಂತೆಯೇ ಆದರ್ಶ ಪ್ರೀತಿಯ ಹುಡುಕಾಟವಿತ್ತು. 'ಇಂಡಿಯಾನ' (1832) ವ್ಯಾಲೆಂಟೈನ್ (1832), ಲೇಲಿಯಾ (1833), ಮೋಪ್ರಾ (1838). ಲೇಲಿಯಾ ಮತ್ತು ಮೋಪ್ರಾ ತಮ್ಮ ಪ್ರೇಮ–ಕಾಮದ ವಿವರಗಳಿಂದ ಭಾರೀ ಸುದ್ದಿ ಮಾಡಿದವು. ಆಕೆಯ ಆಸಕ್ತಿ ರಾಜಕೀಯದೆಡೆ ಹರಿದದ್ದೂ ಉಂಟು. ಲ ಮನ್ನೇ ದ್ಯಾಂಗಿಬೋ ಕಾನ್‌ಸುಲೊ (1845) ರಲ್ಲಿ ದುಡಿವ ಮನುಷ್ಯನ ಮೆಚ್ಚುಗೆಯ ಚಿತ್ರವಿದೆ. 1842ರಲ್ಲಿ ಬರೆದ ಕಾನ್‌ಸುಲೋದಲ್ಲಿ ಕ್ರೈಸ್ತೇತರರ 'ದೇವರೇ ವಿಶ್ವವೆಂಬ. ವಿಶ್ವವೇ ದೇವರೆಂಬ' ಧರ್ಮವನ್ನು ಉಪದೇಶಿಸಿದ್ದಿದೆ.

ಜಾರ್ಜ್ ಸ್ಯಾಂಡ್ ಹೇರಳವಾಗಿ ಪತ್ರ ಬರೆದವಳು. ಆಕೆಯ ಒಂದು ಪತ್ರದಲ್ಲಿ ವಿವಾಹವನ್ನು ಕುರಿತಂಥಾ ಅಭಿಪ್ರಾಯವನ್ನು ಯಾವ ಮುಜುಗರವಿಲ್ಲದೆ ಮುಕ್ತವಾಗಿ ಹೇಳಿದ್ದಾಳೆ–'ನನ್ನ ಪತಿ ತನಗೆ ಇಷ್ಟ ಬಂದಂತೆ ವರ್ತಿಸುತ್ತಾನೆ. ತನಗೆ ಇಚ್ಛೆಯಾದ ಹೆಂಗಸರನ್ನು ಇಟ್ಟುಕೊಳ್ಳುತ್ತಾನೆ. ತನ್ನ ಎಸ್ಟೇಟನ್ನು ತನ್ನಿಚ್ಛೆಯಂತೆ ನಡೆಸುತ್ತಾನೆ, ಅವನ ಪಾಲಿಗಿರುವ ಈ ಸರ್ವ ಸ್ವತಂತ್ರ ನನ್ನ ಹಕ್ಕಿಗೂ ಇರಬೇಕಾದ್ದು ನ್ಯಾಯವಲ್ಲವೆ ? ಆದ್ದರಿಂದಲೇ ನಾ ಸಂಪೂರ್ಣ ಸ್ವತಂತ್ರಳು, ನಾ ಮನೆಗೆ ಮಧ್ಯರಾತ್ರಿಯಾದರೂ ಬರುತ್ತೇನೆ, ರಾತ್ರಿ ಕಳೆದು ಮುಂಜಾನೆಯಾದರೂ ಬರುತ್ತೇನೆ. ಇದು ನನ್ನ ಇಚ್ಛೆ'.

ತನ್ನ ಬರಹದಲ್ಲಿ ಬರೆದ ರಮ್ಯ ಪ್ರೇಮಗಳನ್ನು ಆಕೆ ಬದುಕಿನಲ್ಲಿ ಮೊದಲು ಅನುಭವಿಸಿ ಬರೆದಳು ಎನ್ನುತ್ತಾನೆ ಆಸ್ಕರ್ ವೈಲ್ಡ್. ತನ್ನ ಕಥಾನಾಯಕಿ ಲೆಲಿಯಾಳಂತೆ ಆಕೆ ತನ್ನ ಕನಸಿನ ಆದರ್ಶ ಪುರುಷನ ನಿರೀಕ್ಷೆಯಲ್ಲಿದ್ದಳು. ತನ್ನ ಆಧ್ಯಾತ್ಮದ ಮನೋಭಾವಕ್ಕೆ ಪೂರಕವಾಗಬಲ್ಲ ಗಂಡಿನ ಪ್ರತೀಕ್ಷೆಯಲ್ಲಿ. ಸ್ಯಾಂಡ್ ಬಹಳಷ್ಟು ಬಾರಿ ತನಗಿಂತ ಕಿರಿಯ ಯುವಕರತ್ತ ಮನಸ್ಸು ಸೆಳೆದದ್ದುಂಟು.

1833ರ ಆಗಸ್ಟ್ ತಿಂಗಳು. ಆಕೆ ಅಂಥಾ ಒಂದು ಪ್ರೀತಿಯಲ್ಲಿ ಸಿಲುಕಿದ್ದಳು. ಆಕೆಯ ಪ್ರಿಯಕರ ಹೆಣ್ಣು ಕಂಡ ಕವಿತೆ, ಸಂಗೀತಕ್ಕೆ ಮಾರಿಕೊಂಡು ಸಾಲಗಾರನಾದ 23 ವರ್ಷದ ಆಲ್‌ಫ್ರೆಡ್ ದ ಮ್ಯೂಸೇ. ಬರೆಯಲಿದ್ದ ಕಾದಂಬರಿಗೆ ಮುಂಗಡ ಹಣ ಪಡೆದು ಸ್ಯಾಂಡ್, ಮ್ಯೂಸೇನೊಡನೆ ಆ ಶಿಶಿರದಲ್ಲಿ ಇಟಲಿಗೆ, ವೆನಿಸ್ಸಿಗೆ, ಮಧ್ಯೆ ಫ್ಲಾರೆನ್ಸ್‌ಗೆ ನಡೆದಳು. ತನ್ನ ಈ ಪ್ರೇಮ ಪ್ರಯಾಣದಲ್ಲೂ ದಿನಕ್ಕೆ ನಾಲ್ಕರಿಂದ ಆರು ಗಂಟೆಗಳ ಕಾಲ ಬರೆದಳು. ಬಿಡುವು ಸಿಕ್ಕ ಮ್ಯೂಸೇ ಊರು ಸುತ್ತಲು ಹೊರಟ. ಸ್ವಲ್ಪ ಕಾಲದಲ್ಲೇ ಅವಳನ್ನು ಬಿಟ್ಟು ನಡೆದ. ಈ ಪ್ರೀತಿಯಲ್ಲಿ ಸ್ಯಾಂಡ್ ಹತಾಶಳಾದಳು. ಅವಳ ಸ್ವತಂತ್ರ ಜೀವನ ಶೈಲಿ ಅರೆಬರೆ ಉಳಿದಿದ್ದ ವಿವಾಹದಲ್ಲಿ ಬಿರುಗಾಳಿ ಎಬ್ಬಿಸಿದ್ದಿತು. ಒಂದು ಸಂಜೆಯ ಊಟದ ಹೊತ್ತು, ಮನೆಗೆ ಬಂದ ಅತಿಥಿಗಳ ಎದುರು ಗಂಡ ಕ್ಯಾಸಿಮಿರ್ ಕೈಯಲ್ಲೊಂದು ಗನ್ ಹಿಡಿದು ಗುಂಡು ಹಾರಿಸುವುದಾಗಿ ಬೆದರಿಸಿದ. ಕಾನೂನು ರೀತಿ ವಿಚ್ಛೇದನದ ಅವಕಾಶವಿರಲಿಲ್ಲ. ಆದರೆ ಕಡೆಗೂ ಆಕೆಗೆ ಬೇರ್ಪಡಲು ಅವಕಾಶ ದೊರೆಯಿತು. ತನ್ನ ಪಿತ್ರಾರ್ಜಿತ ಆಸ್ತಿಯನ್ನು, ತನ್ನಿಬ್ಬರು ಮಕ್ಕಳ ಉಸ್ತುವಾರಿಯ ಹಕ್ಕನ್ನು ಪಡೆದಳು.

ತನ್ನ ಕಹಿ ವಿವಾಹದ ಅನುಭವಗಳು, ಗಂಡಿಗೊಂದು, ಹೆಣ್ಣಿಗೊಂದು ಇದ್ದ ಸಂಪ್ರದಾಯ

ಸಮಾಜದ ರೀತಿ ನೀತಿಗಳು, ಜಾರ್ಜ್ ಸ್ಯಾಂಡ್ ಮಹಿಳಾ ಹಕ್ಕುಗಳಿಗಾಗಿ ಹೋರಾಡುವಂತೆ ಮಾಡಿತು. ದಿನಪತ್ರಿಕೆಯಲ್ಲಿ ಸತತವಾಗಿ ಬರೆದ ಅವಳ ಲೇಖನ ಮಾಲೆ 'ಲೆಟರ್ಸ್ ಟು ಮಾರ್ಸಿ'ನಲ್ಲಿ ಆಕೆ 'ಪುರುಷರ ದೊಡ್ಡ ಅಪರಾಧವೆಂದರೆ ಅವರು ಮಹಿಳೆಗೆ ವಿದ್ಯಾಭ್ಯಾಸದ ಅವಕಾಶವಿಲ್ಲದಂತೆ ಮಾಡಿರುವುದು. ಇದು ಮಹಿಳೆಯರ ಮೇಲಿನ ವಿಪರೀತದ ದೌರ್ಜನ್ಯ' ಎಂದು ಬರೆದಳು. ಮಹಿಳೆಯರಿಗೆ ಆಸ್ತಿ ಹಕ್ಕು ಸಿಗಬೇಕೆಂದು ವಾದಿಸಿದಳು. ಮಹಿಳೆಗೆ ವಿಚ್ಛೇದಿಸುವ ಅವಕಾಶ, ಮರು ಮದುವೆಯ ಹಕ್ಕು ಇರಬೇಕೆಂದು ಬಲವಾಗಿ ವಾದಿಸಿದಳು. ತನ್ನ ಲೇಖನಗಳ ಮೂಲಕ, ಕವಿಗಳು, ಚಿತ್ರಕಾರರು, ಸಂಗೀತಕಾರರು, ರಾಜಕಾರಿಣಿಗಳು ಸೇರುತ್ತಿದ್ದ ತನ್ನ ಔತಣ ಕೂಟಗಳಲ್ಲಿ ತನ್ನ ಮಹಿಳಾ ಚಳುವಳಿಯನ್ನು ಮುಂದುವರೆಸಿದಳು.

1848ರ ಕ್ರಾಂತಿ ಯೂರೋಪಿನಲ್ಲೆಲ್ಲ ಹರಡಿ ಹಬ್ಬಿತು. ಅದರೊಡನೆ ಲೂಯಿಸ್–ಫಿಲಿಪನ ಜಡ್ಡುಗಟ್ಟಿದ ಆಡಳಿತವನ್ನು ಕಿತ್ತುಕೊಂಡು ಹೋಯಿತು. ಗಣಿಗಳಲ್ಲಿ, ಕಾರ್ಖಾನೆಗಳಲ್ಲಿ ಮಹಿಳೆಯರ ಮಕ್ಕಳ ಶೋಷಣೆ, ದಿನಕ್ಕೆ 12 ಗಂಟೆಗಳ ಕಡ್ಡಾಯ ದುಡಿಮೆ, ಕೆಲವೇ ಮಂದಿಯ ಕೈಯಲ್ಲಿದ್ದ ಮತ ಚಲಾಯಿಸುವ ಹಕ್ಕು–ಈ ಎಲ್ಲಕ್ಕೂ ಇತಿಶ್ರೀ ಹಾಡಿದ ವರ್ಷ. ಜಾರ್ಜ್ ಸ್ಯಾಂಡ್‌ಳ ಆಸಕ್ತಿ ರಾಜಕೀಯದೆಡೆಗೂ ಇತ್ತು. 1848ರ ಕ್ರಾಂತಿಯನ್ನು ಬೆಂಬಲಿಸಿ ಲೆಟ್ರ್ ಓ ಪೀಪಲ್ ಬರೆದಳು.

1852ರಲ್ಲಿ ಜಾರ್ಜ್ ಸ್ಯಾಂಡ್ ತನ್ನ ಕಾದಂಬರಿಗಳನ್ನಾಧರಿಸಿದ 25 ನಾಟಕಗಳಿಂದ ಸಾಕಷ್ಟು ಪ್ರಸಿದ್ಧಳಾದಳು. ಆಕೆಯ ರಂಗಭೂಮಿಯ ಸಾಹಸಗಳಿಗೆ ಕಲಾವಿದ ಅಲೆಕ್ಸಾಂಡರ್ ಮ್ಯಾನ್ಸೋನ ನೆರವಿತ್ತು. ರಂಗಮಂಚವನ್ನು, ಉಡುಪುಗಳನ್ನು ವಿನ್ಯಾಸ ಮಾಡಿದಾತ. ಆಕೆಗಿಂತ 13 ವರ್ಷ ಚಿಕ್ಕವನಾದ ಮ್ಯಾನ್ಸೋ ಆಕೆಯ ಬದುಕಿನ ಸಂಧ್ಯಾಕಾಲದಲ್ಲಿ ತಂಪು ಪ್ರೀತಿಯ ನೆರಳು ತಂದಿದ್ದ. 'ವೃದ್ಧಾಪ್ಯದವರೆಗೂ ಎಳೆಯರಾಗಿಯೇ ಬದುಕೋಣ. ಸಾವಿನ ಹೊಸಿಲಲ್ಲೂ, ಈಗಷ್ಟೆ ಬದುಕು ಪ್ರಾರಂಭಿಸಿರುವಂತೆ ಜೀವಿಸೋಣ'– ಜಾರ್ಜ್ ಸ್ಯಾಂಡ್‌ಳ ಜೀವನೋತ್ಸಾಹ ಹೀಗಿತ್ತು.

1854ರಲ್ಲಿ ಜಾರ್ಜ್ ಸ್ಯಾಂಡ್ ತನ್ನ ಆತ್ಮಚರಿತ್ರೆ 'ಲಿಸ್ತ್ವಾರ್ ದ ಮ ವೀ'ಯನ್ನು ಪ್ರಕಟಿಸಿದಳು. 1804ರಲ್ಲಿ ಹುಟ್ಟಿದ ಜಾರ್ಜ್ ಸ್ಯಾಂಡ್ 1876ರ ಜೂನ್ ತಿಂಗಳಲ್ಲಿ ತನ್ನ ಪ್ರಸಿದ್ಧಿಯ ತುತ್ತತುದಿಯಲ್ಲಿ ಮೃತಳಾದಳು. ಆಕೆಯ ಕೊನೆಯ ಕಾದಂಬರಿ ಅಪೂರ್ಣವಾಗಿ ಉಳಿದಿತ್ತು. ಸಾಹಿತ್ಯದ ಜಗತ್ತಿನಲ್ಲಿ ಕಿಚ್ಚೆಬ್ಬಿಸಿದ ಮೊಟ್ಟ ಮೊದಲ ಲೇಖಕಿ ಜಾರ್ಜ್ ಸ್ಯಾಂಡ್. ಸ್ತ್ರೀ ವಿಮೋಚನೆಯ ಬಾವುಟವನ್ನು ಎತ್ತಿ ಹಿಡಿದು ಹೊರಟವಳು. ಆದರೆ ಅಸಮಾನತೆಯ ಬುನಾದಿಯ ಮೇಲೆ ಕಾಲೂರಿದ ಸಂಪ್ರದಾಯ ಸಮಾಜದ ಕನ್ನಡಿಯಲ್ಲಿ ಕಂಡ ಆಕೆಯ ಚಿತ್ರ ಬೇರೆಯೇ ಇತ್ತು, ವಾಸ್ತವಕ್ಕೆ ವ್ಯತಿರಿಕ್ತವಾಗಿ ವಕ್ರವಿತ್ತು.



(6ನೇ ಪುಟದಿಂದ)

ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ. ಕಾರಣಗಳು, ವಿವರಗಳು ಏನೇ ಇರಲಿ ಪ್ರಕಾಶ್‌ಕೌರಳ ಮೇಲೆ ಹಾಡುಹಗಲಿನಲ್ಲೇ ನಡೆಸಿದ ದೌರ್ಜನ್ಯಕ್ಕೆ ಇದಾವುದೂ ಸಬೂಬಲ್ಲ.

ಸಿ.ಬಿ.ಐ. ತನಿಖೆಗಾಗಿ ಒತ್ತಾಯಿಸಿರುವ ಜನವಾದಿ ಮಹಿಳಾ ಸಂಘಟನೆಯು ರಾಜ್ಯದ ರಾಜಧಾನಿಯಾದ ಜೈಪುರದಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದೆ.

★

# ಸ್ವೀಕೃತಿ

## ನಿನ್ನ ಹಿಂದಿನ ನಾನು (ಕವನ ಸಂಕಲನ)

ಲೇಖಕ : ಪ್ರೇಮಾ ತಾಶೀಲದಾರ
ಸುಂದರ ಪುಸ್ತಕ ಪ್ರಕಾಶನ

ಇದು ಶ್ರೀಮತಿ ಪ್ರೇಮಾ ತಾಶೀಲದಾರ ಅವರ ಎರಡನೆಯ ಕವನ ಸಂಕಲನ. ಕಳೆದ ಒಂದು ದಶಕದ ಅವಧಿಯಲ್ಲಿ ಪ್ರೇಮಾ ಅವರು ಬರೆದ ಈ ಕವನಗಳ ದನಿ ಒಂದು ಪ್ರೇಕ್ಷಕ ಸಮುದಾಯವನ್ನು ಕುರಿತು ಗಟ್ಟಿಯಾಗಿ ಹೇಳುವ ದನಿಯಾಗಿರದೆ, ಎದುರು-ಬದುರು ಕುಳಿತು ಆತ್ಮೀಯವಾಗಿ ಸುಖ-ದುಃಖಗಳನ್ನು ಹಂಚಿಕೊಳ್ಳುವ ದನಿಯಾಗಿದೆ.

## ಬಹಳ ಕಾದಿದ್ದೇನೆ (ಕವನ ಸಂಕಲನ)

ಲೇಖಕ : ಗಂಗೂ ಮೂಲಿಮನಿ
ಸುಂದರ ಪುಸ್ತಕ ಪ್ರಕಾಶನ

ಗಂಗೂ ಮೂಲಿಮನಿಯವರ ಎರಡನೆಯ ಕವನ ಸಂಕಲನವಿದು. ಈ ಸಂಕಲನದ ಏಕೈಕ ಧ್ವನಿಯೆಂದರೆ ಹೆಣ್ಣು ಜೀವದ ಹಪಹಪಿಕೆ. ಈ ಕವನ ಸಂಕಲನದಲ್ಲಿ ಕವಯಿತ್ರಿ ಪ್ರೀತಿ, ನಿರಾಶೆ, ಸಂತೋಷ, ವಿಷಾದಗಳನ್ನು ಆಕರ್ಷಣೆ ವಿಕರ್ಷಣೆಗಳನ್ನು ಆಳವಾದ ಪ್ರಾಮಾಣಿಕತೆಯಿಂದ ಬಿಗಿ ಅಭಿವ್ಯಕ್ತಿಯ ಬಗೆಗಿನ ಎಚ್ಚರದಿಂದ ಇಲ್ಲಿ ಅಕ್ಷರಿಸಿದ್ದಾರೆ.

## ಗಂಧರ್ವ ಗಿರಿ (ಕವನ ಸಂಕಲನ)

ಲೇಖಕ : ಎಂ. ಸಿ. ಜಯಪ್ಪ
ಪೂರ್ಣಿಮಾ ಪ್ರಕಾಶನ, ಮುಳ್ಳೂರು.
ಅಂಚೆ : ನಿಡ್ತ, ಸೋಮವಾರಪೇಟೆ.

"ಗಂಧರ್ವ ಗಿರಿ" ಜಯಪ್ಪ ಅವರ ಮೊದಲ ಕೃತಿ. ಪ್ರಕೃತಿ ಹಾಗೂ ಪ್ರೀತಿಯವಳನ್ನು ಅತ್ಯಂತ ಧಾರಾಳ ಮನಸ್ಸಿನಿಂದ ಅರ್ಥೈಸಿರುವುದು ಇಲ್ಲಿನ ಕವನಗಳಲ್ಲಿ ವ್ಯಕ್ತವಾಗುವ ಪ್ರಧಾನ ಅಂಶ. ನವೋದಯ ಕಾವ್ಯ ಸಂದರ್ಭದ ಕಾಣ್ಕೆ ಹಾಗೂ ಗೇಮತೆಯನ್ನು ಅನುಕರಿಸಿದ ಇಲ್ಲಿನ ಹೆಚ್ಚಿನ ಕವನಗಳು ಸಿನೆಮಾ ಸಾಹಿತ್ಯದಿಂದಲೂ ಪ್ರೇರಿತಗೊಂಡಂತಿದೆ.

## ಭಾರತೀಯ ದರ್ಶನಗಳು

ಲೇಖಕ : ಡಾ|| ದೇಬಿಪ್ರಸಾದ ಚಟ್ಟೋಪಾಧ್ಯಾಯ
ಅನುವಾದ : ಬಿ. ವಿ. ಕಕ್ಕಿಲ್ಲಾಯ

ಭಾರತೀಯ ದರ್ಶನದಲ್ಲಿ ಹಲವು ತತ್ವಜ್ಞಾನದ ಪರಂಪರೆಗಳಿವೆ. ಭಾರತೀಯ ತತ್ವಶಾಸ್ತ್ರವನ್ನು ಕೂಲಂಕುಷವಾಗಿ ಅಭ್ಯಾಸ ಮಾಡಿ ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದ ಮಾರ್ಕ್ಸ್‌ವಾದಿ ವಿದ್ವಾಂಸರಾದ ಡಾ|| ದೇಬಿಪ್ರಸಾದ್ ಚಟ್ಟೋಪಾಧ್ಯಾಯರು ಭಾರತೀಯ ದರ್ಶಗಳಿಗೆ ಬರೆದ ಜನಪ್ರಿಯ ಪ್ರವೇಶಿಕೆಯೇ ಈ ಗ್ರಂಥ.

## ಉಚಲ್ಯಾ

ಲೇಖಕ : ಲಕ್ಷ್ಮಣ ಗಾಯಕವಾಡ
ಅನುವಾದ : ಚಂದ್ರಕಾಂತ ಪೋಕಳೆ

1988ನೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿಯಾದ ಇದು ಮರಾಠಿಯಲ್ಲಿನ ಆತ್ಮಕತೆಯ ಕನ್ನಡ ಅನುವಾದ. ಇಲ್ಲಿನ ಭಾಷೆಗೆ ಶೃಂಗಾರದ ಸೋಗಿಲ್ಲ. ಆದರೆ ನೇರ ಎದೆಗೆ ತಾಗುವ ನಿಷ್ಠುರ ಗುಣವಿದೆ. ನೂರಾರು ವರ್ಷಗಳಿಂದ ತುಳಿತಕ್ಕೊಳಗಾದ ಜನರ ನೋವಿನ, ಸಿಟ್ಟಿನ, ತಳಮಳದ, ಅಸಹಾಯಕತೆಯ ನಿಟ್ಟುಸಿರಿದೆ. ಬದುಕಬೇಕು ಎಂಬ ತುಡಿತವಿದೆ. ಬ್ರಿಟಿಷರಿಂದ 'ಕ್ರಿಮಿನಲ್ ಟ್ರೈಬ್' ಎಂಬ ಹಣೆಪಟ್ಟಿ ಅಂಟಿಸಿಕೊಂಡ ಬುಡಕಟ್ಟಿನಲ್ಲಿ ಹುಟ್ಟಿದ ಶ್ರೀ ಲಕ್ಷ್ಮಣ ಗಾಯಕವಾಡರು ಹೊರ ಜಗತ್ತಿಗೆ ಅಪರಿಚಿತವಾಗಿರುವ ಹಲವಾರು ಒಳನೋಟಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ತಮ್ಮ ಜನರ ಬದುಕಿನ ಬಗ್ಗೆ ಇತರರೂ ಕಣ್ಣು ತೆರೆಯುವಂತೆ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

## ಈಶ್ವರ ಅಲ್ಲಾ (2ನೇ ಮುದ್ರಣ)

ಲೇಖಕ : ಜಿ. ಕೆ. ಗೋವಿಂದ ರಾವ್

ಒಂದೇ ಆವರಣದ ಎರಡು ವಿಭಿನ್ನ ಸಂಸ್ಕೃತಿಗಳು ನಿರ್ಮಿಸುವ ಒತ್ತಡಗಳು, ರೂಪಿಸುವ ವ್ಯಕ್ತಿತ್ವ

ಗಳು, ರೂಢಿಸುವ ಮೇಲು–ಕೀಳರಿಮೆಗಳು ವ್ಯಕ್ತಿಯ ಬದುಕನ್ನು ಅಸ್ತವ್ಯಸ್ತಗೊಳಿಸುವ ತರಾವರಿ ನಮೂನೆಗಳನ್ನು "ಈಶ್ವರ ಅಲ್ಲಾ" ಮನವರಿಕೆ ಮಾಡಿಕೊಡುತ್ತದೆ. ನಮ್ಮ ನೆಲದ ಧರ್ಮ ಮತ್ತು ರಾಷ್ಟ್ರೀಯತೆಯ ಸಮಾಜವ್ಯಾಪೀ ಬಿಕ್ಕಟ್ಟಿನ ಒಳನೇಯ್ಗೆಯ ಚೂಪು–ತುದಿಗಳನ್ನು ಲೇಖಕರು ನಿಸ್ಸಂಕೋಚವಾಗಿ ಗುರುತಿಸಿದ್ದಾರೆ. ನಿರ್ಭಾವುಕ ಮಾತುಗಾರಿಕೆಯ "ಈಶ್ವರ ಅಲ್ಲಾ" ವಸ್ತು ಮತ್ತು ತಂತ್ರಗಳ ಅನ್ಯೋನ್ಯತೆಗೆ ಒಳ್ಳೆಯ ಮಾದರಿಯಾಗುವುದಲ್ಲದೆ, ಕನ್ನಡದಲ್ಲಿ ಅದ್ವಿತೀಯ ಬರವಣಿಗೆಯಾಗಿದೆ.

### ರಾಮನಿಗೆ ಸೀತೆ ಏನಾಗಬೇಕು ?

ಲೇಖಕ : ಡಾ॥ ಆರುದ್ರ

ಅನು : ಕೆ. ಎಲ್. ಗೋಪಾಲಕೃಷ್ಣ ರಾವ್

ತೆಲುಗಿನ ಮಹಾಕವಿ ಆರುದ್ರರವರು ನಾನಾ ದೇಶಗಳ ರಾಮಕಥೆಗಳನ್ನೂ, ರಾಮಾಯಣವನ್ನೂ ಪರಾಮರ್ಶಿಸುತ್ತಾ ಬರೆದಿರುವ ಕೌತುಕಪೂರ್ಣ ಪ್ರಬಂಧ ಸಂಕಲನವಿದು. ಸೀತಾರಾಮರ ಸಂಬಂಧ, ಬಾಂಧವ್ಯಗಳನ್ನು ಪರಾಮರ್ಶಿಸುತ್ತ ಅವುಗಳ ಮೇಲೆ ಬೆಳಕು ಚೆಲ್ಲಿರುವ ಈ ಪರಿಶೋಧನಾತ್ಮಕ ಪ್ರಬಂಧ ಗುಚ್ಛ ಇಡೀ ಭಾರತದಲ್ಲೇ ಮೊತ್ತಮೊದಲ ಕೃತಿಯಾಗಿದೆ.

### ಮಹಾತ್ಮ ಫುಲೆ

ಲೇಖಕ : ಮುರಳೀಧರ ಜಗತಾಪ

ಅನುವಾದ : ಅಕಿಂಚನ

ಜ್ಯೋತಿ ಭಾ ಫುಲೆ ಕಳೆದ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಬದುಕಿದ್ದ ಮಹನೀಯರು. ಮುಂದೆ ಹಲವು ಶತಮಾನಗಳ ಕಾಲ ಬೆಳಗಬಲ್ಲಂಥ ಜಾಗೃತಿಯ ದೀಪ ಹಚ್ಚಿದವರು. ಸಮಾಜದ ಕೆಳ ವರ್ಗದ ಜನರ ನೋವನ್ನು ಸ್ವತಃ ಅನುಭವಿಸಿ ಬಲ್ಲವರು. ನೂರಾರು ಮೇಲು–ಕೀಳು ಜಾತಿಗಳಿರುವ ಈ ಭವ್ಯ ಭಾರತದಲ್ಲಿ, ಹಲವು ಸಾವಿರ ವರ್ಷಗಳ ತರುವಾಯ ಸಮಾಜದ ಕೆಳವರ್ಗದವರಿಗಾಗಿ, ಮುಖ್ಯವಾಗಿ ಅಸ್ಪೃಶ್ಯರು ಹಾಗೂ ಹೆಣ್ಣು ಮಕ್ಕಳಿಗಾಗಿ ಶಾಲೆಗಳನ್ನು ತೆರೆಯುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಗೆ ನಾಂದಿ ಹಾಕಿದವರು.

### ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ

ಲೇಖಕ : ಡಾ॥ ಜಿ. ರಾಮಕೃಷ್ಣ

ಪಶ್ಚಿಮ ಬಂಗಾಳದ 'ಗಣದರ್ಪಣ' ಸಂಸ್ಥೆಯು ಏರ್ಪಡಿಸಿದ್ದ ಜೆ.ಬಿ. ಎಸ್. ಹಾಲ್ಡೇನ್ ಸ್ಮಾರಕ ಉಪನ್ಯಾಸದ ಅಂಗವಾಗಿ ಡಾ॥ ಜಿ. ಆರ್. ಅವರು ಮಾತನಾಡಿದ 'ದೇವಿಪ್ರಸಾದ್ ಮತ್ತು ಲೋಕಾಯತ ದರ್ಶ'ದ ವಿಸ್ತೃತ ರೂಪವೇ ಈ ಹೊತ್ತಿಗೆ. 'ದೇವಿ ಪ್ರಸಾದ್'ರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಪರಿಚಯಿಸುವ ಲೇಖನವೂ ಇದರ ಆರಂಭದಲ್ಲಿದೆ.

ಈ ಮೇಲಿನ ಆರು ಪುಸ್ತಕಗಳನ್ನು ನವಕರ್ನಾಟಕ ಪ್ರಕಾಶನದವರು ಹೊರತಂದಿರುತ್ತಾರೆ.

## ಅಭಿನಂದನೆ

ದೆಹಲಿಯ ಇನ್ಸ್‌ಪೆಕ್ಟರ್ ಜನರಲ್ (ಬಂಧಿಖಾನೆ) ಆಗಿರುವ ಕಿರಣ್ ಬೇಡಿಯವರಿಗೆ ಈ ಬಾರಿಯ ಏಷ್ಯಾದ ಪ್ರತಿಷ್ಠಿತ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ. ಬಿಕ್ಷುಕರು, ಅಪರಾಧಿಗಳು ಮತ್ತು ಮದ್ಯವ್ಯಸನಿಗಳು ಇವರುಗಳ ಜೀವನವನ್ನು ಉತ್ತಮಗೊಳಿಸಲು ಶ್ರಮಿಸಿದ ಈ ದಕ್ಷ ಮಹಿಳೆಗೆ ಸಂದ ಈ ಪುರಸ್ಕಾರಕ್ಕೆ 'ಅಚಲ' ಅಭಿನಂದಿಸುತ್ತದೆ.

ಚಿಂತನ

# ಮತಾಂಧತೆಯ ಸಂದರ್ಭದಲ್ಲಿ

★ ಡಾ. ಜಿ. ರಾಮಕೃಷ್ಣ

ಬಂಗ್ಲಾದೇಶದಲ್ಲಿ ಇತ್ತೀಚೆಗೆ ಜಹಾನಾರಾ ಎಂಬೊಬ್ಬಾಕೆ ಮೃತಪಟ್ಟಳು. ಹಲವು ದಶಕಗಳ ಕಾಲ ಆಕೆ ಗೊಡ್ಡು ಸಂಪ್ರದಾಯಗಳ ಹಾಗೂ ಮೂರ್ಖ ಮತಾಂಧತೆಯ ವಿರುದ್ಧ ಹೋರಾಟ ನಡೆಸಿದ್ದಳು. ಆಕೆಯ ಶವದ ಮೆರವಣಿಗೆಯಲ್ಲಿ ಅಧಿಕ ಸಂಖ್ಯೆಯ ಜನ ಪಾಲ್ಗೊಂಡಿದ್ದರು. ಅದು ಢಾಕಾದಲ್ಲಿ ಜರುಗಿದ್ದು. ಮೆರವಣಿಗೆಯ ಮೇಲೆ ಮತಾಂಧರು ಕಲ್ಲು ತೂರಿದರು. ಆದರೆ ಜನ ಧೃತಿಗೆಡದೆ ಮುನ್ನಡೆದರು.

ಅದಕ್ಕೆ ಒಂದು ವಾರ ಮುಂಚೆ ಅದೇ ನಗರದಲ್ಲಿ ಒಂದು ಸಾವಿರ ಹಾವಾಡಿಗರು, ದೊಂಬರಾಟದವರು, ಮೆರವಣಿಗೆ ನಡೆಸಿದ್ದರು. ತಾಸ್ಲಿಮಾ ನಸ್ರೀನ್‌ಗೆ ನೇಣುಗಂಬದ ಶಿಕ್ಷೆಯಾಗಬೇಕೆಂದು ಅವರ ಆಗ್ರಹ. ಆಕೆಯನ್ನು ಹಿಡಿದು ಶಿಕ್ಷಿಸದಿದ್ದರೆ, ಢಾಕಾ ನಗರದಲ್ಲಿ ಹತ್ತು ಸಾವಿರ ಹಾವುಗಳನ್ನು ಹರಿಬಿಡುವುದಾಗಿ ಅವರು ಬೆದರಿಕೆ ಹಾಕಿದ್ದರು. ಇದೊಂದು ಹೊಸರೀತಿಯ ಬೆದರಿಕೆ. ಅನೇಕ ವರ್ಷಗಳ ಹಿಂದೆ ಭುಟ್ಟೋ ಮಹಾಶಯ ಪಾಕಿಸ್ತಾನದಲ್ಲಿ ಅದನ್ನು ಮಾಡಿ ತೋರಿಸಿದ್ದ. ತನ್ನ ವಿರುದ್ಧದ ರಾಜಕೀಯ ಪಕ್ಷವೊಂದು ಬೃಹತ್ ಬಹಿರಂಗ ಸಭೆ ನಡೆಸಲು ಜನರನ್ನು ಸೇರಿಸಿದ್ದಾಗ ಮೂಟೆಗಟ್ಟಲೆ ಹಾವುಗಳನ್ನು ಸಭೆಯಲ್ಲಿ ಸುರಿಸಿದ್ದ ಈ ಮುತ್ಸದ್ದಿ. ಬಂಗ್ಲಾದೇಶದ ಸಾಮಾಜಿಕ-ರಾಜಕೀಯ ಜೀವನದಲ್ಲಿ ಹರಡಿರುವ ವಿಷ ಸಾಲದೆಂಬಂತೆ ಈಗ ತಾಸ್ಲಿಮಾ ವಿರುದ್ಧ ವಿಷ ಕಾರುತ್ತಾ ಜನರನ್ನು ಹುಚ್ಚೆಬ್ಬಿಸುತ್ತಿದ್ದಾರೆ. ಈಕೆ ವೈದ್ಯಕೀಯ ಪದವೀಧರೆ, ಲೇಖಕಿ, ಸಾಮಾಜಿಕ ಕಾರ್ಯಕರ್ತೆ. ರಾಜಕೀಯದಲ್ಲಿ ಮತೀಯ ಹೊಲಸನ್ನು ಬೆರಸಕೂಡದೆಂದು ಮೊದಲಿಂದ ವಾದಿಸುತ್ತಿದ್ದಾಳೆ. ಸಾಮಾಜಿಕ ಸಂಬಂಧಗಳು ಮಾನವೀಯವಾಗಿರಬೇಕೇ ಹೊರತು ಮತೀಯವಾಗಕೂಡದೆಂದು ಅವಳು ಅಭಿಪ್ರಾಯ ಪಟ್ಟಿದ್ದಾಳೆ.

ಜೊತೆಗೆ ಧಾರ್ಮಿಕ ಮೊಂಡುತನವನ್ನು ಕಟುವಾಗಿ ಟೀಕಿಸಿ ಎಲ್ಲ ಧರ್ಮಗಳನ್ನೂ ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕೆಂದು ಆಗಾಗ್ಗೆ ಪ್ರತಿಪಾದಿಸುತ್ತಾಳೆ. ಧರ್ಮ ನಿರಪೇಕ್ಷತೆಯಲ್ಲಿ ಅಚಲವಾದ ನಂಬಿಕೆ ಇರಿಸಿಕೊಂಡಿರುವ ಈಕೆ ಮತೀಯ ಕಟ್ಟುಪಾಡುಗಳನ್ನು ಯಾರ ಮೇಲೂ ಹೇರುವ ಅಧಿಕಾರ ಸರ್ಕಾರಕ್ಕಾಗಲಿ ಮುಲ್ಲಾಗಳಿಗಾಗಲಿ ಇಲ್ಲವೆಂದು ಸಾರ್ವಜನಿಕವಾಗಿ ಹೇಳುತ್ತಾಳೆ. ಮತೀಯ ಸಂಪ್ರದಾಯಗಳು ಹಾಗೂ ನಿಯಮಗಳು ಆಯಾ ಕಾಲಕ್ಕೆ ತಕ್ಕಂತೆ ಮಾರ್ಪಾಟಾಗಬೇಕೆಂದು ಅಪೇಕ್ಷಿಸುವ ತಾಸ್ಲಿಮಾ ಧರ್ಮಗ್ರಂಥಗಳನ್ನು ಸಾರ್ವಕಾಲಿಕವೆಂದು ಹೇರುವುದನ್ನು ವಿರೋಧಿಸುತ್ತಾಳೆ. ಧಾರ್ಮಿಕ ಮೌಲ್ಯಗಳನ್ನು ಪಾಲಿಸಲು ಸಿದ್ಧವಿರುವ ಈಕೆ ಮತೀಯ ಮೌಢ್ಯವನ್ನು ತೀವ್ರವಾಗಿ ಹೀಯಾಳಿಸುತ್ತಾಳೆ. ಮುಲ್ಲಾ ಸಂತತಿ ಹಾಗೂ ಮತಾಂಧರು ಆಕೆ ಹೆಂಗಸಾಗಿದ್ದು ಇದನ್ನೆಲ್ಲಾ ಹೇಳುವುದನ್ನು ಸಹಿಸಲಾರರು. ಅದಕ್ಕೇ ಅವಳನ್ನು ನೇಣುಗಂಬಕ್ಕೇರಿಸಲು ಇವರೆಲ್ಲರ ಸನ್ನಾಹ ಮತ್ತು ಉತ್ಸಾಹ.

ಎಲ್ಲ ಮತೀಯ ಗ್ರಂಥಗಳನ್ನೂ ಆದರಿಸುತ್ತಲೇ ಅವುಗಳನ್ನು ಮಾರ್ಪಾಟು ಮಾಡಿಕೊಳ್ಳುತ್ತಿರಬೇಕೆಂಬುದನ್ನು ಕುಶವಂತ್ ಸಿಂಗ್ ಸಹ ಹೇಳುತ್ತಾರೆ. ಆದರೆ ಭಾರತದಲ್ಲಿ ಯಾರೂ ಆತನನ್ನು ಗಲ್ಲಿಗೇರಿಸಬೇಕೆಂದು ಆರ್ಭಟ ಮಾಡಿಲ್ಲ. ಆಶ್ಚರ್ಯವೆಂದರೆ ತಾಸ್ಲಿಮಾಗೆ ಗಲ್ಲಾಗಬೇಕೆಂದು ಪ್ರತಿಭಟಿಸುತ್ತಿರುವ ಬಂಗ್ಲಾದೇಶದ ಮತಾಂಧರು ಸರಿಯಾಗಿಯೇ ಧರ್ಮಾಚರಣೆ ಮಾಡುತ್ತಿದ್ದಾರೆಂದು 'ಪ್ರಜಾವಾಣಿ' ಪತ್ರಿಕೆಯಲ್ಲಿ ಒಂದಿಬ್ಬರು ಪತ್ರ ಬರೆದಿದ್ದರೆಂಬುದು ಗಮನಿಸಬೇಕು. ಬಹುಶಃ ಇವರು ಮತಧರ್ಮದ ಹೆಸರಿನಲ್ಲಿ ನಡೆಯುವ ಎಲ್ಲ ಹಿಂಸೆ, ಅತ್ಯಾಚಾರ ಮತ್ತು ದೌರ್ಜನ್ಯಗಳನ್ನು ಸಮರ್ಥಿಸುತ್ತಾರೆಂದು ತೋರುತ್ತದೆ.

ಎರಡು ಬೇರೆ ಉದಾಹರಣೆಗಳನ್ನು ನೋಡ

ಬಹುದು. ಇದೇ ಫೆಬ್ರವರಿಯ ಘಟನೆಗಳಿವು. (ಅ) ಕರಾಚಿಯ ಮಾರುಕಟ್ಟೆಗೆ ತರಕಾರಿ ಕೊಳ್ಳಲು ಒಬ್ಬ ಮುದುಕಿ ಹೋಗಿದ್ದಳು. ಕೈಚೀಲದಲ್ಲಿ ಒಂದು ಕುರಾನಿನ ಒಂದು ಪ್ರತಿ ಇತ್ತು. ಚೀಲದಿಂದ ಏನನ್ನೋ ತೆಗೆಯ ಹೋಗಿ ಆ ಪುಸ್ತಕವನ್ನು ಕೆಳಗೆ ಬೀಳಿಸಿದಳು. ಕುರಾನಿಗೆ ಅಗೌರವ ತೋರಿದಳೆಂದು ಅವಳನ್ನು ದಸ್ತಗಿರಿ ಮಾಡಲಾಯಿತು. ಹೆಂಗಸಾಗಿ ಧರ್ಮಗ್ರಂಥವನ್ನು ಅವಳು ತನ್ನ ಬಳಿ ಇಟ್ಟುಕೊಳ್ಳಬಾರದಾಗಿತ್ತೆಂದು ಕೆಲವು ಮುಲ್ಲಾಗಳು ಉದ್ಗಾರ ತೆಗೆದರು. ಸದಾ ಆ ಪುಸ್ತಕವನ್ನು ಹೊತ್ತು ತಿರುಗುತ್ತಿದ್ದ ಮುದುಕಿ ಅಜಾಗರೂಕಳಾಗಿ ಅದನ್ನು ಕೆಳಗೆ ಬೀಳಿಸಿದರೆ ಅದು ಅಗೌರವ ಸೂಚನೆಯೇ ? (ಆ) ಅದೇ ತಿಂಗಳಲ್ಲಿ ಅದೇ ನಗರದ ಒಂದು ಕೊಳಚೆ ಪ್ರದೇಶದಲ್ಲಿ ಹತ್ತು–ಹನ್ನೆರಡು ವರ್ಷ ವಯಸ್ಸಿನ ಕ್ರಿಶ್ಚಿಯನ್ ಹುಡುಗನೊಬ್ಬ ಆಟವಾಡುತ್ತಿದ್ದ. ಅವನು ಅನಕ್ಷರಸ್ಥ. ಆಟವಾಡುತ್ತಿದ್ದ ಕಡೆ ಜೋಪಡಿಯ ಗೋಡೆಯ ಮೇಲೆ ಇಸ್ಲಾಂ ಮತಕ್ಕೆ ಅವಹೇಳನವೆನ್ನಲಾದ ಏನನ್ನೋ ಬರೆಯಲಾಗಿತ್ತಂತೆ. ಅದನ್ನು ಬರೆದವನು ಈ ಹುಡುಗನೆಂದು ಅವನನ್ನು ದಸ್ತಗಿರಿ ಮಾಡಲಾಯಿತು.

### ಮತಾಂಧತೆಯ ಪರಿಣಾಮ

ಮತಾಂಧತೆಯು ಜನಸಮೂಹವನ್ನು ಆವರಿಸಿದಾಗ ಇಂತಹ ಪ್ರಸಂಗಗಳು ಸ್ವಾಭಾವಿಕ. ರಾಜಕೀಯ ಅಧಿಕಾರ ಗಳಿಸಲು ಅಥವಾ ಉಳಿಸಿಕೊಳ್ಳಲು ಇಂತಹ ಮೌಢ್ಯವನ್ನು ಪೋಷಿಸಿದರೆ ಯಾವುದೇ ರಾಷ್ಟ್ರಕ್ಕೂ ಗಂಡಾಂತರ ತಪ್ಪಿದ್ದಲ್ಲ. ಆಗ ಮತಧರ್ಮವು ಮಾನವೀತೆಯನ್ನು ಮೆಟ್ಟಿ ನಿಲ್ಲುತ್ತದೆ, ಸಾಮಾಜಿಕ ಸಂಬಂಧಗಳು ಮುರಿದು ಬೀಳುತ್ತವೆ, ಸಾಮೂಹಿಕ ಜೀವನ ಮೌಲ್ಯಗಳು ಕುಸಿಯುತ್ತವೆ. ಉದಾತ್ತ ಕಲ್ಪನೆಗಳು ಸೊರಗಿ ಅವುಗಳ ಜಾಗದಲ್ಲಿ ಹತಾಶೆ, ಕ್ರೋಧ, ಸಂಶಯ ಮತ್ತು ಮುಯ್ಯಿಯ ಭಾವನೆಗಳು ಮನೆ ಮಾಡಿಕೊಳ್ಳುತ್ತವೆ. ಇದು ವ್ಯಕ್ತಿಗೆ, ಸಮಷ್ಟಿಗೆ. ಮಾನವತೆಗೆ ಹಾಗೂ ರಾಷ್ಟ್ರೀಯತೆಗೆ ನಾಚಿಕೆ ತರಿಸುವಂಥದು. ಮತಾಂಧತೆಯ ಸೊಕ್ಕಿನಲ್ಲಿ ನಾಚಿಕೆಗೆ ಸ್ಥಳವಿಲ್ಲವಾಗುತ್ತದೆ. ಹಾಗಿದ್ದರೆ ಮುಂದಿನ ಹೆಜ್ಜೆ ಯಾವುದು ?

ತಾಸ್ಲಿಮಾ ನಸ್ರೀನ್ ಪ್ರಕಟಿಸಿರುವ "ಲಜ್ಜಾ" ಕಾದಂಬರಿಗೆ ಇದೆಲ್ಲಾ ಹಿನ್ನೆಲೆಯಾಗುತ್ತದೆ. ಆ ಕಾದಂಬರಿ ಬರೆದುದಕ್ಕೆ ಆಕೆ ಬಂಗ್ಲಾದೇಶದಲ್ಲಿ ಎಲ್ಲಿಲ್ಲದ ಆಕ್ರೋಶಕ್ಕೆ ಬಲಿಯಾಗಿದ್ದಾಳೆ, ಜೀವ ಉಳಿಸಿಕೊಳ್ಳಲು ಎಲ್ಲೋ ಅಡಗಿ ಕುಳಿತಿದ್ದಾಳೆ. ಕಾದಂಬರಿಯಾಗಿ ಅದು ಕಳಪೆಯಾದದ್ದು ಎಂಬ ವಿಮರ್ಶೆ ಒಂದು ಕಡೆಯಾದರೆ ಅಂತಹದ್ದನ್ನು ಬರೆದು ಮತೀಯ ನಂಬಿಕೆ ಉಳ್ಳವರನ್ನು ಕೆರಳಿಸಬಾರದಾಗಿತ್ತೆಂದು ಇನ್ನೊಂದು ಕಡೆ ಮಾತು ಕೇಳಿಬರುತ್ತದೆ. ಸಾಹಿತ್ಯಕವಾಗಿ "ಲಜ್ಜಾ" ಬಹಳ ಉನ್ನತಮಟ್ಟದ್ದೆಂದು ಯಾರೂ ಭ್ರಮಿಸಿಲ್ಲ. ಆದರೆ ಅಲ್ಲಿಯ ವಸ್ತುವನ್ನು ಟೀಕಿಸುವುದು ಅದರ ಗುಣಾವಗುಣಗಳ ಕಾರಣಕ್ಕಲ್ಲ. ಅದು ಎಲ್ಲೋ ಕಸಿವಿಸಿ ಉಂಟುಮಾಡುತ್ತದೆ, ಬೊಟ್ಟು ಮಾಡಿ ನಮ್ಮ ಪಾತಕಗಳನ್ನು ತೋರಿಸುತ್ತದೆ, ನಮ್ಮ ಬೇಜವಾಬ್ದಾರಿತನವನ್ನು ಛೇಡಿಸುತ್ತದೆ. ಅದರಿಂದಾಗಿ ಅದನ್ನು ಹೇಗೋ ಇಲ್ಲವಾಗಿಸಬೇಕೆಂಬ ಅವಶ್ಯಕತೆ ಬಹಳ ಮಂದಿಗೆ ಇರುತ್ತದೆ. ಇದು ಬಂಗ್ಲಾದೇಶದ ಪರಿಸ್ಥಿತಿಗೆ ಸಂಬಂಧಿಸಿದ್ದಾದರೂ ಒಂದು ರೀತಿಯಲ್ಲಿ ನಮ್ಮ ಸನ್ನಿವೇಶ, ವಾತಾವರಣ ಮತ್ತು ರಾಜಕೀಯದ

**ಸಾಹಿತ್ಯಕವಾಗಿ "ಲಜ್ಜಾ" ಬಹಳ ಉನ್ನತ ಮಟ್ಟದೆಂದು ಯಾರೂ ಭ್ರಮಿಸಿಲ್ಲ. ಆದರೆ ಅಲ್ಲಿಯ ವಸ್ತುವನ್ನು ಟೀಕಿಸುವುದು ಅದರ ಗುಣಾವಗುಣಗಳ ಕಾರಣಕ್ಕಲ್ಲ. ಅದು ಎಲ್ಲೋ ಕಸಿವಿಸಿ ಉಂಟುಮಾಡುತ್ತದೆ. ಬೊಟ್ಟುಮಾಡಿ ನಮ್ಮ ಪಾತಕಗಳನ್ನು ತೋರಿಸುತ್ತದೆ. ನಮ್ಮ ಬೇಜವಾಬ್ದಾರಿತನವನ್ನು ಛೇಡಿಸುತ್ತದೆ. ಅದರಿಂದಾಗಿ ಅದನ್ನು ಹೇಗೋ ಇಲ್ಲವಾಗಿಸಬೇಕೆಂಬ ಅವಶ್ಯಕತೆ ಬಹಳ ಮಂದಿಗೆ ಇರುತ್ತದೆ. ಇದು ಬಂಗ್ಲಾದೇಶದ ಪರಿಸ್ಥಿತಿಗೆ ಸಂಬಂಧಿಸಿದ್ದಾದರೂ ಒಂದು ರೀತಿಯಲ್ಲ ನಮ್ಮ ಸನ್ನಿವೇಶ, ವಾತಾವರಣ ಮತ್ತು ರಾಜಕೀಯದ ಮೇಲಿನ ವ್ಯಾಖ್ಯಾನವೂ ಆಗುತ್ತದೆ. ಆದ್ದರಿಂದ "ಲಜ್ಜಾ" ಕಾದಂಬರಿಗೆ ಪ್ರತಿಕ್ರಿಯೆಯು ಬಂಗ್ಲಾದೇಶದಲ್ಲಿದ್ದರತೆ ಸಾಕಷ್ಟು ವಿರೋಧದಿಂದ ತುಂಬಿದ್ದರೆ ಆಶ್ಚರ್ಯವೇನಲ್ಲ.**

ಮೇಲಿನ ವ್ಯಾಖ್ಯಾನವೂ ಆಗುತ್ತದೆ. ಆದ್ದರಿಂದ "ಲಜ್ಜಾ" ಕಾದಂಬರಿಗೆ ಪ್ರತಿಕ್ರಿಯೆಯು ಬಂಗ್ಲಾದೇಶ ದಲ್ಲಿದ್ದಂತೆ ಭಾರತದಲ್ಲೂ ಸಾಕಷ್ಟು ವಿರೋಧದಿಂದ ತುಂಬಿದ್ದರೆ ಆಶ್ಚರ್ಯವೇನಲ್ಲ.

ಈ ಕಾದಂಬರಿಯು ಡಿಸೆಂಬರ್ 6, 1992 ರಂದು ಭಾರತದಲ್ಲಿ ಕೆಲವು ಮತಾಂಧ ಬಣಗಳು ತಮ್ಮ ರಾಜಕೀಯ ಮುನ್ನಡೆಗಾಗಿ ಶ್ರೀರಾಮಚಂದ್ರನನ್ನು ಮುಂದೆ ಮಾಡಿ ಅಯೋಧ್ಯೆಯಲ್ಲಿ ಒಂದು ಮಸೀದಿ ಯನ್ನು ಧ್ವಂಸಮಾಡಿದ್ದನ್ನು ಪ್ರಸ್ತಾವನೆಯನ್ನಾಗಿ ಹೊಂದಿದೆ. ಈ ದುಷ್ಟ ಕ್ರಿಯೆಗೆ ಪ್ರತಿಕ್ರಿಯೆ-ಪ್ರತೀ ಕಾರವಾಗಿ ಬಂಗ್ಲಾದೇಶದಲ್ಲಿ ನರಮೇಧ, ದೇವಸ್ಥಾನ ಗಳ ಮೇಲೆ ಹಲ್ಲೆ, ಹಿಂದೂ ಕುಟುಂಬಗಳ ಮೇಲೆ ದೌರ್ಜನ್ಯ, ಆಸ್ತಿಯ ಲೂಟಿ. ರಕ್ತದ ಹೊಳೆ, ಇತ್ಯಾದಿ ಕೇಡುಗಳು ಲೆಕ್ಕವಿಲ್ಲದಷ್ಟು ನಡೆದು ಹೋಗು ತ್ತವೆ. ಧರ್ಮನಿರಪೇಕ್ಷತೆ, ರಾಷ್ಟ್ರೀಯ ಐಕ್ಯತೆ, ಸಾಮಾಜಿಕ–ಆರ್ಥಿಕ ಪ್ರಗತಿ, ಸಾಂಸ್ಕೃತಿಕ ಅನನ್ಯತೆ, ಮಾನವಿಕ ಸಂಬಂಧಗಳು, ಇವೆಲ್ಲಾ ದ್ವೇಷದ ಬೆಂಕಿ ಯಲ್ಲಿ ಸುಟ್ಟು ಕರಕಾಗುತ್ತವೆ. ರಾಷ್ಟ್ರ ತನ್ನದು, ಅದ ಕ್ಕಾಗಿ ನಾನು, ತನ್ನದೆಲ್ಲಾ ಅದಕ್ಕೆ ಮುಡಿಪು, ಅದನ್ನು ಳಿದು ತನಗೆ ವ್ಯಕ್ತಿತ್ವವಿಲ್ಲ, ಅದರ ಏಳಿಗೆಯೇ ತನ್ನ ಸುಖ, ಇತ್ಯಾದಿ ಭಾವನೆಗಳನ್ನು ಜೀವಂತವಾಗಿಸಿ ಕೊಂಡಿದ್ದವರಿಗೆ ಇದರಿಂದ ಸಹಿಸಲಾಗದ ವೇದನೆ, ಮಾನಸಿಕ ತಾಕಲಾಟ ಮತ್ತು ದೈಹಿಕ ಅಸ್ವಸ್ಥತೆಗಳು ಉಂಟಾಗುತ್ತವೆ. ತಮ್ಮ ಭೂತ–ವರ್ತಮಾನ–ಭವಿಷ್ಯ ಗಳು ಈ ರಾಷ್ಟ್ರದೊಂದಿಗೆ ಮೇಳೈಸಿವೆಯೆಂದು ಜೀವಿ ಸುತ್ತಿದ್ದ ವ್ಯಕ್ತಿಗಳ ಆಳವಾದ ಹಾಗೂ ಬಲವಾದ ಬೇರುಗಳು ಸಹ ಈ ವಿಷದಿಂದ ಬೆಂಡಾಗಿ ಬತ್ತಿ ಹೋಗುತ್ತವೆ. ತಾವು ಕಟ್ಟಿದ ರಾಷ್ಟ್ರ, ಮೌಲ್ಯ, ಮೈತ್ರಿ, ಎಲ್ಲಾ ಹುಸಿಯಾಗಿ ಕಂಡು ಇಡೀ ಜೀವನದ ಶ್ರಮ ವ್ಯರ್ಥವಾಯಿತಲ್ಲ, ಎಂಬ ಕೊರಗು ಅಗಾಧ ವಾಗಿ ಬೆಳೆಯುತ್ತದೆ.

ಸುಧಾಮಯ ದತ್ತ ಮೈಮೆನ್‌ಸಿಂಗ್ ಜಿಲ್ಲೆಗೆ ಸೇರಿದವನು. ಭಾರತ ಇಬ್ಭಾಗವಾಗುವುದಕ್ಕೂ ಮುಂಚಿನಿಂದ ಅಲ್ಲಿದ್ದ ಈತ ವೃತ್ತಿಯಲ್ಲಿ ವೈದ್ಯ. ಮತೀಯ ವೈಮನಸ್ಯದಿಂದಾಗಿ ಸಂಪತ್ತು ಕಳೆದು ಕೊಂಡು ಢಾಕಾಗೆ ಹೋಗಿ ಕಾರ್ಪಣ್ಯದ ಜೀವನಕ್ಕೆ ಕಟ್ಟುಬಿದ್ದ. ಆದರೆ ರಾಷ್ಟ್ರೀಯ ಮಮತೆ ಕಳೆದುಕೊಳ್ಳ ಲಿಲ್ಲ. 1952ರ ಬಂಗಾಳಿ ಭಾಷಾ ಚಳುವಳಿಯಿಂದ ಹಿಡಿದು 1971ರ ರಾಷ್ಟ್ರೀಯ ವಿಮೋಚನಾ ಚಳು ವಳಿಯ ವರೆಗೆ ಎಲ್ಲ ಜನಪರ ಹೋರಾಟಗಳಲ್ಲೂ ಭಾಗಿಯಾಗಿದ್ದ ಈತ ಕಟ್ಟಾ ಸಮಾಜವಾದಿ, ನಾಸ್ತಿಕ, ಧರ್ಮ ನಿರಪೇಕ್ಷ ಬುದ್ಧಿಯುವನ್ನು ಕಿರಣ್ಮಯಿ ಆತನ ಹೆಂಡತಿ. ಅತ್ಯಂತ ಸಹನಶೀಲಳು. ಎಲ್ಲರಿಗೂ ಬೇಕಾ ದವಳು. ಬಂಗ್ಲಾದೇಶ ಬಿಟ್ಟೋಡುವ ಪ್ರಶ್ನೆಯೇ ಆಕೆಗೆ ರುಚಿಸದು. ತನ್ನ ವೈಯಕ್ತಿಕ ಸುಖವನ್ನು ಮರೆತು ಕುಟುಂಬಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿರುವ ಸಾಧ್ವೀಮಣಿ ಈಕೆ. ಸುರಂಜನ ಅವರ ಮಗ. ಪದವೀಧರ ನಿರುದ್ಯೋಗಿ. ಯುವ ಸಮಾಜ ವಾದಿ ಕಾರ್ಯಕರ್ತನಾಗಿದ್ದ ಇವನು ಮತೀಯ ಭಾವನೆಗಳನ್ನು ಎಂದೂ ಅನುಭವಿಸದವನು. ತನ್ನ ಮತ ಮನುಷ್ಯಮತವೆಂದು ನಂಬಿ ಆಚರಿಸಿದವನು. ಅವನ ತಂಗಿ ಮಾಯಾ. ಆರು ವರ್ಷದವಳಿದ್ದಾಗ ಒಮ್ಮೆ ಕಾಣೆಯಾಗಿದ್ದು ಮರಳಿ ಬಂದಿದ್ದವಳು. ಯಾರೋ ದುಷ್ಕರ್ಮಿಗಳು ಅವಳನ್ನು ಅಪಹರಿಸಿ ಕೊಂಡು ಹೋಗಿದ್ದರು. ಆಮೇಲೆ ಎಲ್ಲ ಮತದವ ರಲ್ಲೂ ಸ್ನೇಹ ಸಂಪಾದಿಸಿದ್ದಳು. ಜೀವನದಲ್ಲಿ ಅಪಾರ ಆಸಕ್ತಿ ಹೊಂದಿದ್ದವಳು. ಆದರೆ ಈಗ ಚಿರಂತನ ದುಃಖಕ್ಕೆ ನೂಕಲ್ಪಟ್ಟವಳು.

ಅಯೋಧ್ಯೆಯ ಮಸೀದಿ ಉರುಳುವುದಕ್ಕೆ ಮೊದಲೂ ಬಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರು ಬೇಕಾದಷ್ಟು ಉಪಟಳಗಳಿಗೆ ಗುರಿಯಾಗಿ ದೇಶ, ಆಸ್ತಿ, ನೆಂಟರು, ಸ್ನೇಹಿತರು, ಎಲ್ಲವನ್ನೂ ಬಿಟ್ಟು ನಿರ್ಗತಿಕ ರಾಗಿ ಭಾರತದೇಶಕ್ಕೆ ಓಡುತ್ತಿದ್ದರು. ಇದರ ಪರಿಣಾ ಮವಾಗಿ ಹಿಂದೂಗಳ ಜನಸಂಖ್ಯೆ ಕ್ರಮೇಣ ಕಡಿಮೆ ಯಾಗುತ್ತಿತ್ತು. ರಾಜಕೀಯದಲ್ಲಾಗಲೀ, ನೌಕರಿಗಳ ಲ್ಲಾಗಲಿ ಅವರಿಗೆ ಪ್ರಾತಿನಿಧ್ಯ ತೀರ ಕಡಿಮೆ. ಅವರ ಕಣ್ಣ ಮುಂದೆಯೇ ಅವರ ಆಸ್ತಿಯನ್ನು ದೋಚು ವುದು ಸರ್ವೇಸಾಮಾನ್ಯವಾಗಿತ್ತು. ಎಷ್ಟೋ ಸಾಯುಜ್ಯ ವನ್ನು ಸಾಧಿಸಿ ರಾಷ್ಟ್ರದೊಡನೆ ಸಮೀಕರಿಸಿಕೊಂಡರೂ ಅವರು ಪರಕೀಯರು ! ಭಾರತದಲ್ಲಿನ ಅಲ್ಪಸಂಖ್ಯಾ ತರು ಅನುಭವಿಸುವ ಯಾವ ಹಕ್ಕೂ ಬಂಗ್ಲಾದೇಶದ ಅಲ್ಪಸಂಖ್ಯಾತರಿಗಿಲ್ಲ. ಅವರ ವ್ಯಕ್ತಿತ್ವವನ್ನು ಹೀಯಾ ಳಿಸುವುದು ಹಲವರ ಗೀಳು. ಅಯೋಧ್ಯೆಯಲ್ಲಿ ಮಸೀದಿ ಭಗ್ನಗೊಳಿಸಲ್ಪಟ್ಟಾಗ ಈ ಸನ್ನಿವೇಶವು ಇನ್ನೂ

ಬಿಗಡಾಯಿಸಿತು. ಬಂಗ್ಲಾದೇಶದ ಹಿಂದುವು ಅಯೋಧ್ಯೆಯ ದುಷ್ಕರ್ಮಕ್ಕೆ ಕಾರಣಕರ್ತನೆಂಬಂತೆ ಅವನ ಮೇಲೆ ಆಕ್ರಮಣ ನಡೆಯಿತು. ಸುಧಾಮಯ, ಸುರಂಜನ, ಇತ್ಯಾದಿಗಳು ಕೂಡ ಈ ಭೀಕರ ಹಲ್ಲೆಗೆ ತುತ್ತಾದರು. ಮಾಯಾ ಮತ್ತೆ ಅಪಹರಿಸಲ್ಪಟ್ಟಳು. ಆ ಸುಂದರ ಸೌಮ್ಯ ಜೀವಿ ಏನೇನು ಹೀನ ಕೃತ್ಯಗಳಿಗೆ ಬಲಿಯಾದಳೋ ತಿಳಿದವರಾರು ! ಅಕ್ಕಪಕ್ಕದವರು ಕೂಡ ಅಸಡ್ಡೆ ತೋರುವವರೇ. ರಾಜಕೀಯವಾಗಿ ಪುರೋಗಾಮಿಗಳೆನಿಸಿಕೊಂಡಿದ್ದವರು ಸಹ ಮತಾಂಧತೆಯ ಅಲೆಯ ಹೊಡೆತದ ಎದುರು ಭದ್ರವಾಗಿ ನಿಲ್ಲಲಾರದೆ ಹೋದರು. ಅಲ್ಲೊಂದು ಹೇಳಿಕೆ ಇಲ್ಲೊಂದು ಪ್ರತಿಭಟನಾ ಮೆರವಣಿಗೆಯನ್ನು ಬಿಟ್ಟರೆ ಮತಾಂಧತೆಯನ್ನು ದಿಟ್ಟತನದಿಂದ ಎದುರಿಸುವ ಮನೋಭಾವ, ಛಲ, ಧಾರ್ಷ್ಟ್ಯ, ಕರ್ತವ್ಯಬುದ್ಧಿ, ಯಾರಲ್ಲೂ ಉಳಿಯಲಿಲ್ಲ. ಇಡೀ ದೇಶಕ್ಕೆ ಪಾರ್ಶ್ವವಾಯು ತಗುಲಿತು, ಹೃದಯಾಘಾತ ಉಂಟಾಯಿತು. 1971ರ ಜನಾಂಗೀಯ ಅಭಿಮಾನ, ಐಕ್ಯತೆ, ಮೌಲ್ಯ ಸಾಧನೆಯ ಗುರಿ, ಎಲ್ಲಾ ನೀರು ಪಾಲು. ಸ್ವತಃ ಸುಧಾಮಯ ಇದರಿಂದ ಕುಪಿತನಾದ, ಅವನಿಗೆ ಲಕ್ವಾ ಹೊಡೆಯಿತು, ಹೃದಯಾಘಾತವಾಯಿತು. ಕಿರಣ್ಮಯಿ ರೋದನವನ್ನು ಎಷ್ಟು ತಡೆದರೂ ಕಡೆಗೆ ಉಕ್ಕಿ ಹರಿಯಿತು. ಸುರಂಜನನು ಹೆಜ್ಜೆ ಹೆಜ್ಜೆಗೂ ತಾನು ಹಿಂದು, ಅಲ್ಪಸಂಖ್ಯಾತ, ಮರ್ದನಕ್ಕೆ ವಸ್ತು, ಎಂಬುದನ್ನು ಅನುಭವಿಸಿದ. ಮಾಯಾಳ ಅಪಹರಣಕ್ಕೆ ಸೇಡು ತೀರಿಸಿಕೊಳ್ಳಬೇಕು, ಆದರೆ ಅದಕ್ಕೆ ಅನುವಿಲ್ಲ. ಹೀಗೆ ಬಡಪಡಿಸುತ್ತಾ ಹೆಂಡ ಕುಡಿದು ಪ್ರಪಂಚವನ್ನು ಮರೆಯಲೆಂದು ಹೆಣಗಿದ. ಕಡೆಗೆ ತನ್ನ ನೆಲದ ಬೇರನ್ನು ಕತ್ತರಿಸಿಕೊಂಡು ಹೊರಗೆಲ್ಲಿಯಾದರೂ ಬೀಳು ಬಿಡಬಹುದೇನೋ ಎಂದು ತವಕಿಸಿದ.

ಅತ್ಯಂತ ಶುಭ್ರವಾದ ಮಾನವೀಯ ಸಂಬಂಧಗಳು ಕ್ಷಣಾರ್ಧದಲ್ಲಿ ಹೇಗೆ ಬದಲಾಗಿ ಮೃಗೀಯ ಪ್ರವೃತ್ತಿಗಳಿಗೆ ಎಡೆಮಾಡಿಕೊಡುತ್ತವೆಂಬುದನ್ನು ಸ್ಥೂಲವಾಗಿ ಅವಲೋಕಿಸುವುದು "ಲಜ್ಜಾ" ಕಾದಂಬರಿಯ ಒಂದು ಉದ್ದೇಶ. ಈ ಬದಲಾವಣೆಗೆ ಕಾರಣ ಮತಾಂಧತೆ. ಸಾಹಿತ್ಯಕವಾಗಿ ಈ ಕಾದಂಬರಿಯು ಬಹಳ ಪ್ರಬುದ್ಧವಾದದ್ದೆಂದು ಹೇಳಲಾಗುವುದಿಲ್ಲ. ಯಾವ ಯಾವ ವರ್ಷಗಳಲ್ಲಿ ಎಲ್ಲೆಲ್ಲಿ ಏನೇನು ಮತೀಯ ಧ್ವಂಸಕಾರಿ ಪಾತಕಗಳು ಜರುಗಿದುವು ಎಂಬುದನ್ನು ಪದೇ ಪದೇ ಪಟ್ಟಿ ಮಾಡುವುದು ಲೇಖಕಿಗೆ ಒಂದು ರೀತಿಯ ಒತ್ತಡದಂತೆ ಕೆಲಸ ಮಾಡಿದೆ. ಹೀಗಾಗಿ ಜೀವನಸತ್ವದ ಬದಲು ದಾಖಲೆಗಳ ಸಂಗ್ರಹವನ್ನು ಕಾದಂಬರಿ ನಮ್ಮ ಮುಂದಿರಿಸುತ್ತದೆ. ಹಾಗೆಂದು ತಳ್ಳಿಹಾಕಬಹುದಾದ ಕಾದಂಬರಿಯಲ್ಲ. "ಲಜ್ಜಾ". ಹಲವಾರು ಮಾನಸಿಕ ತುಡಿತಗಳನ್ನು ಅಚ್ಚುಕಟ್ಟಾಗಿ ನಿರೂಪಿಸಬಲ್ಲವಳು ತಾಸ್ಲಿಮಾ. ಕೆಲವೆಡೆಗಳಲ್ಲಿ ಕಾದಂಬರಿಯು ಉನ್ನತ ಮಟ್ಟಕ್ಕೇರುತ್ತದೆ ಕೂಡ.

ನಮ್ಮಲ್ಲಿ ಅಶ್‌ಗರ್ ಅಲಿ ಇಂಜಿನಿಯರ್ ಎಂಬೊಬ್ಬ ತಥಾಕಥಿತ ಪುರೋಗಾಮಿ ಇದ್ದಾರೆ. ಅವರೂ ಸೇರಿದಂತೆ ಹಲವರು ತಾಸ್ಲಿಮಾಳನ್ನು ದೂಷಿಸಿದ್ದಾರೆ. ಮುಲ್ಲಾಗಳು ಮತ್ತವರ ಭಂಟರಷ್ಟು ಕಠೋರವಾಗಿ ಅಲ್ಲದಿದ್ದರೂ ಈ "ಪುರೋಗಾಮಿ ಬುದ್ಧಿಜೀವಿಗಳು" ಆಕೆಯನ್ನು ಪ್ರಚಾರ ಪ್ರಿಯಳು ಮತ್ತು ಅನಗತ್ಯವಾಗಿ ಮತೀಯ ಭಾವನೆಗಳನ್ನು ಟೀಕಿಸಿ ರೊಚ್ಚಿಗೆಬ್ಬಿಸುವವಳು ಎಂದೆಲ್ಲಾ ಛೇಡಿಸಿದ್ದಾರೆ. ತಾನು ಮತ್ತು ಅಮೆರಿಕೆಯಲ್ಲಿರುವ ತನ್ನ ಸ್ನೇಹಿತ ರಿಫತ್ ಹಸನ್ ಕೆಲವು ದಶಕಗಳಿಂದ ಮುಸಲ್ಮಾನರ ಮತ್ತು ವಿಶೇಷವಾಗಿ ಆ ಮತದ ಮಹಿಳೆಯರ ಏಳಿಗೆಗಾಗಿ ಶ್ರಮಿಸುತ್ತಿದ್ದು ಒಮ್ಮೆಯಾದರೂ ಮುಲ್ಲಾಗಳಿಗೆ ಅಸಮಾಧಾನವಾಗುವಂತಹ ಮಾತನ್ನಾಡಿಲ್ಲವೆಂದು ಅಶ್‌ಗರ್ ಅಲಿ ತಮಗೆ ತಾವು ಪ್ರಶಂಸಾಪತ್ರ ಕೊಟ್ಟುಕೊಂಡಿದ್ದಾರೆ. (ದಿ ಹಿಂದೂ, ಜುಲೈ 2, 1994). ಮುಸ್ಲಿಂ ಮಹಿಳೆಯರಿಗೆ ಒಂದಂಗುಲದಷ್ಟು ಮುಂದೆ ಹೋಗಲು ಸಹ ಇವರ ಪ್ರಯತ್ನಗಳಿಂದ ಸಾಧ್ಯವಾಗಿಲ್ಲವೆಂಬುದನ್ನು ಅವರು ಹೇಳಿಲ್ಲ, ಅಷ್ಟೆ. ಮುಲ್ಲಾಗಳ ಕಪಿಮುಷ್ಟಿಯನ್ನು ಸಡಿಲಿಸದೆ ಇಸ್ಲಾಂ ಮತದಲ್ಲಿನ ಕುರುಡು ಮೊಂಡುತನವನ್ನು ಎದುರಿಸಲಾಗುವುದಿಲ್ಲವೆಂದು ಅವರೇಕೆ ತಿಳಿಯುಲೊಲ್ಲರೋ ಗೊತ್ತಾಗುವುದಿಲ್ಲ. ತಾಸ್ಲಿಮಾಳ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ನಿರಾಕರಿಸಿದರೂ ಆಕೆಯೊಡನೆ ಸಹನೆಯಿಂದ ವಾಗ್ಯುದ್ಧ ಏಕೆ ನಡೆಸಬಾರದು ? ಅವಳನ್ನು ಕೊಲ್ಲಬೇಕೆಂಬ ಪೈಶಾಚಿಕ ಹಠವೇಕೆ ? ಮನಮೋಹನ ಸಿಂಗರ ಆರ್ಥಿಕ ನೀತಿಯನ್ನು ಒಪ್ಪದ "ಆರ್ಥಿಕ ಮೂಲಭೂತ ವಾದಿಗಳು"

ಅಷ್ಟೇ ಮೊಂಡುತನದಿಂದ ಅಪರನ್ನು ಕೊಲ್ಲಬೇಕೆಂದು "ಫತ್ವಾ" ನೀಡಬಹುದೆ? ಕೊಲೆಗೆ ಪ್ರೇರೇಪಣೆ ನೀಡುವ ಮುಲ್ಲಾಗಳು ಕಾನೂನಿಗೆ ಬಾಹಿರರೇನು? ಅಂದರೆ, ಆಕೆಯೊಡನೆ ವಾದಿಸಲು ಅಸಮರ್ಥರಾಗಿ ಆಕೆಯನ್ನು ದಂಡಿಸಲು ಹೊರಟಿರುವವರು ನಮ್ಮ ಮೊಂಡುವಾದಿಗಳು, ಎಂದರ್ಥ.

ನಮ್ಮ ದೇಶದಲ್ಲಿ ಎರಡು ವಿಭಾಗಗಳಲ್ಲಿ ತಾಸ್ಲಿಮಾಳ ಕಾದಂಬರಿಗೆ ಎಳ್ಳಷ್ಟೂ ಮನ್ನಣೆ ದೊರೆಯದಿರುವ ಸಂಭವವಿದೆ. ಎರಡು ವಿಭಾಗಗಳೂ ಮತಾಂಧರದ್ದೇ. ಆದರೆ ಮತಗಳು ಬೇರೆ ಬೇರೆ ಅಷ್ಟೆ. ಬಂಗ್ಲಾ ದೇಶದ ಇಸ್ಲಾಮಿ ಮೂಲಭೂತವಾದಿಗಳ ಖಂಡನೆಯು ಭಾರತದ ಹಿಂದೂ ಮತಾಂಧರ ಖಂಡನೆಯೂ ಆಗುತ್ತದೆ. ಅಯೋಧ್ಯೆಯಲ್ಲಿ ಮಸೀದಿಯನ್ನು ಧ್ವಂಸ ಮಾಡಿದ್ದು ಆ ಕೃತ್ಯದ ನಂತರ ಬಂಗ್ಲಾ ದೇಶದಲ್ಲಿ ನಡೆಸಲಾದ ವಿಧ್ವಂಸಕಾರಿ ಅಕೃತ್ಯದಷ್ಟೇ ನಾಚಿಕೆಗೇಡಿನ ವಿಷಯವೆಂದು ತಾಸ್ಲಿಮಾ ಸೂಚಿಸುತ್ತಾಳೆ. ಮಸೀದಿಯನ್ನು ಕೆಡವಿ ತೃಪ್ತಿ ಸಾಲದ ನಮ್ಮ ಜನ ಅಲ್ಲಿ ಕಲ್ಯಾಣ ಸಿಂಗರ ಕೃಪೆಯಿಂದ ರಚಿಸಲಾಗಿರುವ ರಾಮಕೋಟೆಗೆ ಭದ್ರತೆ ಸಾಲದೆಂದು ಅಲಹಾಬಾದ್ ಉಚ್ಚ ನ್ಯಾಯಾಲಯಕ್ಕೆ ಹೋಗುತ್ತಾರೆ! ಮಸೀದಿಯನ್ನೊಡೆದು ಮನಸ್ಸುಗಳನ್ನು ಕಟ್ಟಲಾಗುವುದಿಲ್ಲವೆಂದು ತಾಸ್ಲಿಮಾಳ ಇಂಗಿತ. ಹೀಗಾಗಿ ಬಂಗ್ಲಾ ದೇಶದ ಮುಸಲ್ಮಾನರನ್ನು ಕಟುವಾಗಿ ಟೀಕಿಸುವ "ಲಜ್ಜಾ" ಕಾದಂಬರಿಯು ಎರಡೂ ಮತಗಳ ಮತಾಂಧರಿಗೆ ಖಾರವಾಗಿ ಪರಿಣಮಿಸುತ್ತದೆ. ಕಾದಂಬರಿಯಲ್ಲಿ ಸಾಹಿತ್ಯಾಂಶ ಸೊನ್ನೆಯೆಂದು ಹೇಳುವವರು ಕೆಲವರಾದರೂ ಹಿಂದೂ ಮತಾಂಧತೆಯನ್ನು ತಾಸ್ಲಿಮಾ ಅಂಜಿಕೆಯಿಲ್ಲದೆ ಸೂಚ್ಯವಾಗಿ ಟೀಕಿಸಿರುವುದನ್ನು ಕಾರಣ ಮಾಡಿಕೊಂಡಿದ್ದಾರೆ. ಹಾಗಿಲ್ಲದೆ ಕೇವಲ ಬಂಗ್ಲಾದೇಶದ ಗೊಡ್ಡು ನಂಬಿಕೆಯವರನ್ನು ಮಾತ್ರ ತಾಸ್ಲಿಮಾ ಟೀಕಿಸಿದ್ದಿದ್ದರೆ ಇಲ್ಲಿಯ ಹಿಂದೂ ಮತಾಂಧರು ಆಕೆಯನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. "ಮತಧರ್ಮಕ್ಕೆ ಇನ್ನೊಂದು ಹೆಸರು ಮಾನವೀಯತೆ ಎಂದಾಗಲಿ" ಎಂದು ಆಕೆ ಹೇಳಿದಾಗ ಸದ್ಯದಲ್ಲಂತೂ ಮತಧರ್ಮದಲ್ಲಿ ಮಾನವೀಯತೆಯ ಅಂಶ ಇಲ್ಲವೆಂದು ಅವಳ ಗ್ರಹಿಕೆಯೆಂಬುದು ಸ್ಪಷ್ಟವಿದೆ.

"ಸಮಕಾಲೀನ ಜೀವನದಲ್ಲಿ ಹಿಂಸೆಯು ಹುಚ್ಚು ಪ್ರವಾಹ" ಎಂಬುದನ್ನು ವಸ್ತುವಾಗುಳ್ಳ ಈ ಕಾದಂಬರಿಯು ಹಿಂಸೆಯ ಹತ್ತು ಮುಖಗಳನ್ನು ವಿವರಿಸುತ್ತದೆ. ಆದರೆ ನಿರೂಪಣೆಯ ವಿಧಾನ ಮತ್ತು ತಂತ್ರಗಳನ್ನು ತಾಸ್ಲಿಮಾ ಸಿದ್ಧಿಸಿಕೊಂಡಿಲ್ಲ. ಹಾಗೆಂದರೆ ಆಕೆಯ ನೈಜ ಮಾನವೀಯ ಭಾವನೆ ಮತ್ತು ಧೋರಣೆಗಳನ್ನು ನಾವು ಶಂಕಿಸಬಹುದೆಂದು ಅರ್ಥವಲ್ಲ. ಎಷ್ಟೋ ವೇಳೆ ಕಾದಂಬರಿಯಲ್ಲಿ ಆಕೆ ಕೆಲವು ಭಾವನೆಗಳ ಸಾಂದ್ರತೆಯನ್ನು ನಿರೂಪಿಸುವಾಗ ಪ್ರಭಾವಶಾಲಿ ಪ್ರತಿಮೆಗಳನ್ನು ಬಳಸಿದ್ದಾಳೆ. ಅಲ್ಲಲ್ಲಿ ಪ್ರಗತಿಪರ ಹಾಗೂ ಎಡಪಕ್ಷಗಳ ಡೋಲಾಯಮಾನ ನೀತಿಗಳನ್ನು ತಾಸ್ಲಿಮಾ ಪ್ರಬಲವಾಗಿ ಖಂಡಿಸಿದ್ದಾಳೆ. ಅದರಿಂದ ಕಸಿವಿಸಿಗೊಳ್ಳುವ ಅವಶ್ಯಕತೆ ಇಲ್ಲ. ಬದಲಾಗಿ ಆಕೆಯ ವಿಮರ್ಶೆಯನ್ನು ಸ್ವವಿಮರ್ಶೆಗೆ ಒಂದು ಆಯುಧವನ್ನಾಗಿ ಮಾರ್ಪಾಟು ಮಾಡಿಕೊಳ್ಳುವುದು ಉತ್ತಮ.

---

ಒಟ್ಟಿನಲ್ಲಿ, ಮೊಂಡು ಮತಾಂಧರ ಹಲ್ಲೆಯಿಂದ ತಾಸ್ಲಿಮಾಳನ್ನು ಪಾರುಮಾಡಬೇಕಾದ್ದು ಮಾನವ ಕೋಟಿಯ ನೈತಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿ. ಅದಕ್ಕೆ ಇರುವುದೊಂದೇ ಮಾರ್ಗ: ಧರ್ಮಾಂಧತೆಯ ಎಲ್ಲ ಸ್ವರೂಪಗಳ ವಿರುದ್ಧವೂ ಸಮರಶೀಲರಾಗುವುದು. ತಾಸ್ಲಿಮಾ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯನ್ನೇನೂ ಹಾಕಿಲ್ಲ. ಅವಳಿಗಿಂತಲೂ ಮುನ್ನ ಹಲವರು ಈ ಹಾದಿಯಲ್ಲಿ ಮುನ್ನಡೆದಿದ್ದಾರೆ. ಅವರೆಲ್ಲರ ಜತೆಗೂಡುವುದು ನಮ್ಮ ಮಾನವಿಕ ಕರ್ತವ್ಯ.

---

★



# ದೌರ್ಜನ್ಯವಿರೋಧಿ ಸಮಾವೇಶದಲ್ಲಿ....

ಜುಲೈ 9, ಮಳೆಗಾಲದ ದಿನದಲ್ಲಿ ಮಳೆಯಿಲ್ಲದೆ ಚುರುಗುಟ್ಟುವ ನಿರ್ದಯಿಯಾದ ಬಿಸಿಲು ತಲೆಯ ಮೇಲೆ. ಇದನ್ನು ಲೆಕ್ಕಿಸದ ಸಾವಿರಾರು ಮಹಿಳೆಯರು ನಗರದ ನಾಲ್ಕಾರು ದಿಕ್ಕುಗಳಿಂದ ಮೆರವಣಿಗೆಯಲ್ಲಿ ಸಾಗಿ ಬಂದರು. ದಾರಿಯುದ್ದಕ್ಕೂ ಹೆಣ್ಣಿನ ವಿವಿಧ ಸಮಸ್ಯೆಯ ಮುಖಗಳನ್ನು ಖಂಡಿಸುವ ಘೋಷಣೆಗಳೊಂದಿಗೆ, ಅಂತಹುದೇ ಘೋಷಣೆಯ ಫಲಕಗಳನ್ನು ಹೊತ್ತು ಬಂದರು. ಶಾಲಾ–ಕಾಲೇಜುಗಳಿಂದ ಭಂದ ಹುಡುಗಿಯರು, ಕೈಗೂಸು ಹೊತ್ತ ಅಮ್ಮಂದಿರು, ಹೊಲ–ಗದ್ದೆಗಳಿಂದ ಹಿಡಿದು, ಕಛೇರಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳೆಯರೂ ಸೇರಿದಂತೆ ಸೊಂಟ ಬಗ್ಗಿದ ಅಜ್ಜಿಯರೂ ಈ ಮೆರವಣಿಗೆಯಲ್ಲಿದ್ದರು. ಮುಂಚೂಣಿಯಲ್ಲಿದ್ದ ಸುಮಂಗಲಿ ಸೇವಾಶ್ರಮದ ಎಲ್ಲರ ಪ್ರೀತಿಯ ಅಮ್ಮ 'ಸುಶೀಲಮ್ಮ' ಮೆರವಣಿಗೆಯ ಇಡೀ ಕಾರ್ಯಕ್ರಮದ ಕೇಂದ್ರ ಬಿಂದುವಾಗಿದ್ದರು.

ವಿವಿಧ ದಿಕ್ಕುಗಳಿಂದ ಹರಿದುಬಂದ ಈ ಜನಸಾಗರ ವಿಶಾಲವಾದ ಮಲ್ಲೇಶ್ವರಂ ಮೈದಾನವನ್ನು ಆಕ್ರಮಿಸಿದಾಗ ಒಟ್ಟಾಗಿ ಸೇರಿದ ಈ ಜನಸಮೂಹವನ್ನು ಕ್ರಮದಲ್ಲಿ ಇರುವಂತೆ ವ್ಯವಸ್ಥೆ ಮಾಡಲು ಸ್ವಯಂ ಸೇವಕಿಯರೊಂದಿಗೆ ಪೋಲಿಸ್ ಮಹಿಳೆಯರೂ ಕೈಜೋಡಿಸಿದ್ದು ಮತ್ತೊಂದು ವಿಶೇಷ. ಕರ್ನಾಟಕದ ಡಿ. ಜಿ. ಪಿ. ಆದ ಶ್ರೀ ಆರ್. ರಾಮಲಿಂಗಂ ಅವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವವರಿದ್ದುದರಿಂದಲೂ ಬೃಹತ್ ಸಂಖ್ಯೆಯ ಮಹಿಳಾ ಪೋಲಿಸರು ಮೈದಾನದಲ್ಲಿ ನೆರೆದಿದ್ದರು.

ನಗರದ ವಿವಿಧಮಹಿಳಾ ಸಂಘಟನೆಗಳಸಂಯುಕ್ತ ಆಶ್ರಯದಲ್ಲಿ ರೂಪುಗೊಂಡ ಈ ದೌರ್ಜನ್ಯ ವಿರೋಧಿ ವೇದಿಕೆಯು ಈ ಸಮಾವೇಶದಲ್ಲಿ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರವನ್ನು ಖಂಡಿಸುವುದರೊಂದಿಗೆ ಮಹಿಳೆಯರನ್ನು ಕುರಿತ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಯೋಜಿಸುವ ಉದ್ದೇಶವನ್ನೂ ಹೊಂದಿತ್ತು.

ಈ ವೇದಿಕೆಯ ಸಂಚಾಲಕಿ ಶ್ರೀಮತಿ ಕೆ. ಎಸ್. ವಿಮಲ ಪ್ರಾಸ್ತಾವಿಕ ಭಾಷಣ ಮಾಡುತ್ತಾ "ಇಂದು 3 ತಿಂಗಳ ಹಲ್ಲು ಬಂದಿರದ ಮಗುವಿನಿಂದ ಹಿಡಿದು ಎಂಭತ್ತರ ಮುದುಕಿಯುವರೆಗೂ ಅತ್ಯಾಚಾರ, ದೌರ್ಜನ್ಯ ನಡೆದಿದೆ. ಆದ್ದರಿಂದ ಯಾವುದೇ ರೀತಿಯ ದೌರ್ಜನ್ಯವನ್ನು ವಿರೋಧಿಸುವ ಸ್ತ್ರೀಪುರುಷರೆಲ್ಲರೂ ಇಂದು ಮಹಿಳಾ ದೌರ್ಜನ್ಯವನ್ನು ವಿರೋಧಿಸಬೇಕು. ಸರ್ಕಾರವು ಮಹಿಳೆಯರನ್ನು, ಮಕ್ಕಳನ್ನು ಕುರಿತು ಕಲ್ಯಾಣಕರವಾದ ಎಷ್ಟೇ ಯೋಜನೆಗಳನ್ನು ರೂಪಿಸಿದ್ದರೂ ಅದರ ಜೊತೆಯಲ್ಲೇ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳ ಮೇಲೆ, ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯದ ಪ್ರಕರಣಗಳೂ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಮದ್ಯಪಾನದ ದುಶ್ಚಟಗಳು, ಅಶ್ಲೀಲ ಭಿತ್ತಿ ಚಿತ್ರಗಳು, ಹಿಂಸೆ, ಅಸಭ್ಯತೆಗಳನ್ನು ಪ್ರಚೋದಿಸುವ ಸಿನಿಮಾಗಳು, ದೇಶದ ಸಂಸ್ಕೃತಿಯ ಮೇಲೆ ನಿರಂತರ ಪ್ರಹಾರ ನಡೆಸುತ್ತಿರುವ ವಿದೇಶೀ ಮಾಧ್ಯಮಗಳು ಇವೆಲ್ಲವುಗಳಿಂದ ಬಿಡುಗಡೆ ಹೊಂದಬೇಕೆಂಬ ಹೋರಾಟದ ಆಶಯ ಈ ಸಮಾವೇಶದ್ದು ಎಂದು ಸ್ಪಷ್ಟಪಡಿಸಿದರು.

ಈ ಸಮಾವೇಶವನ್ನು ಉದ್ಘಾಟಿಸಿದ ಕರ್ನಾಟಕದ ಡಿಜಿಪಿ ಶ್ರೀ ಆರ್. ರಾಮಲಿಂಗಂರವರು "ನಾನು ದೌರ್ಜನ್ಯವನ್ನು ವಿರೋಧಿಸುವವನಾದರೂ ಯಾವಾಗಲೂ ಆಂದೋಲನದ ಹೊರಗೇ ಇರುವವನು. 30 ವರ್ಷಗಳ ನನ್ನ ಸೇವಾವಧಿಯಲ್ಲಿ ಮೊದಲ ಬಾರಿಗೆ ಇಂತಹ ಚಳುವಳಿಯ ಉದ್ಘಾಟನೆ ಮಾಡುತ್ತಿರುವೆ. ಆದರೆ ಇದಕ್ಕೆ ದುಃಖವಿಲ್ಲ. ಇಂತಹದೊಂದು ಆಂದೋ

ಲನವನ್ನು ಉದ್ಘಾಟಿಸಲು ನನಗೆ ಸಂತೋಷವೇ ಆಗುತ್ತದೆ" ಎಂದರು. ನಂತರ ನಗರದಲ್ಲಿ ಮತ್ತು ದೇಶದಲ್ಲಿ ನಡೆಯುತ್ತಿರುವ ದೌರ್ಜನ್ಯದ ಅಂಕಿಸಂಖ್ಯೆಗಳನ್ನು ಕೊಡುತ್ತ ಸಮಸ್ಯೆಯ ಗಂಭೀರ ಸ್ವರೂಪವನ್ನು ಸಭಿಕರ ಮುಂದಿಟ್ಟರು. ಮಹಿಳಾ ದೂರು ವಿಭಾಗ ದೇಶದಲ್ಲೇ ಮೊತ್ತಮೊದಲಿಗೆ ದೆಹಲಿಯಲ್ಲಿ ಆರಂಭವಾದರೆ 1989ರಲ್ಲಿ ಕರ್ನಾಟಕದಲ್ಲಿ ಆರಂಭವಾಯಿತು. ಇದು ದೇಶದಲ್ಲಿ ಎರಡನೆಯ ಮಹಿಳಾ ದೂರು ವಿಭಾಗವಾಗಿದೆ. ಕ್ಯಾಬರೆಗಳನ್ನು ತಡೆಗಟ್ಟಲು ಪ್ರಯತ್ನಪಟ್ಟಿದ್ದೇವೆ. ಮತ್ತೆ ಅಂತಹ ಘಟನೆಗಳು ಮರುಕಳಿಸಿದರೆ ನಮ್ಮ ಗಮನಕ್ಕೆ ತನ್ನಿ ಎಂದ ರಾಮಲಿಂಗಂ ಅವರಿಗೆ ಸಭೆಯಲ್ಲಿಯೇ ಕೆಲವರು ನಡೆಯುತ್ತಿರುವ ಹೊಸದಾಗಿ ಆರಂಭವಾದ ಕ್ಯಾಬರೆಗಳ ಮಾಹಿತಿಯನ್ನು ಒದಗಿಸಿ ಪ್ರಶ್ನಿಸಿದರು. ಅಶ್ಲೀಲ ಬಿತ್ತಿಪತ್ರಗಳನ್ನು ಅಂಟಿಸುವುದು, ಅಶ್ಲೀಲ ಸಾಹಿತ್ಯವನ್ನು ತಡೆಗಟ್ಟುವುದನ್ನು ಈ ಆಂದೋಲನವು ಮುಖ್ಯ ಕಾರ್ಯಕ್ರಮವನ್ನಾಗಿ ಮಾಡಿಕೊಳ್ಳಲಿ ಎಂದು ಆಶಿಸಿದರು. ಕೊನೆಗೆ ಅತಿ ಮುಖ್ಯವಾಗಿ ಕುಡಿತದ ವಿರುದ್ಧ ಮಹಿಳೆಯರ ಪ್ರತಿಭಟನೆಯಾಗಬೇಕು. ಇಂತಹ ಹೋರಾಟ ದೌರ್ಜನ್ಯದ ಪರಿಣಾಮವನ್ನು ಕಡಿಮೆ ಮಾಡುವುದು. ಕುಟುಂಬ ಚಿಕ್ಕದಾಗಿರಲಿ, ಕುಡಿತದಿಂದ ಮುಕ್ತವಾಗಿರಲಿ. ಇಂತಹದೊಂದು ಬದಲಾವಣೆಯತ್ತ ಮಹಿಳೆಯರು ಹೋರಾಟ ನಡೆಸಿ ಎಂದರು.

ಭಾಷಣಕಾರರಲ್ಲಿ ಒಬ್ಬರಾದ ಡಾ. ಜಿ. ರಾಮಕೃಷ್ಣ ಅವರು ಮತಧರ್ಮಗಳು ಹೇಗೆ ಮಹಿಳೆಯ ಉಳಿವಿಗೆ, ಅಸ್ತಿತ್ವಕ್ಕೆ ಅಡ್ಡಿಯುಂಟುಮಾಡುತ್ತಿವೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದರು. ಖುರಾನ್ ಬೀಳಿಸಿದ ವೃದ್ಧೆಗೆ ಶಿಕ್ಷೆ ದೊರೆಯುವಂತಹ ಪರಿಸ್ಥಿತಿ, ವೇದ ಉಚ್ಚರಿಸಕೂಡದೆಂದು ಪೂರಿ ಸ್ವಾಮಿಯಿಂದ ಅಪಮಾನಕ್ಕೊಳಗಾದ ಪಂಡಿತೆ, ಸ್ತ್ರೀಯರನ್ನು ಅವಹೇಳನ ಮಾಡುವ ದ್ವಾರಕೆಯ ಸ್ವಾಮಿಗಳು ಇಂದು ವಾಸ್ತವವಾಗಿದೆ, ಈ ರೀತಿಯ ಮತೀಯ ಶಾಸ್ತ್ರಗಳ ಜೊತೆಗೆ ಸಮಾಜದಲ್ಲಿನ ಹೆಣ್ಣಿಗಿರುವ ವಿಧಿ ನಿಯಮ, ಕಟ್ಟು–ಕಟ್ಟಳೆಗಳು ಅವಳಿಗೆ ಗಂಡಿಗೆ ಅಧೀನವಾಗಿರುವಂತೆ ಮಾಡಿರುವುದಲ್ಲದೆ ಸಮಾಜದಲ್ಲಿ ಎರಡನೆಯ ಸ್ಥಾನವನ್ನು ನೀಡಿದೆ. ಇನ್ನೂ ಮುಂದುವರಿದಂತೆ ಅವಳನ್ನು ಮಾರಾಟದ ಒಂದು ವಸ್ತುವನ್ನಾಗಿ ಪರಿಗಣಿಸಲಾಗಿದೆ. ಇಂತಹ ಒಂದು ಸ್ಥಿತಿಯನ್ನು ಸ್ವಾಭಾವಿಕವೆಂದು ಭಾವಿಸಲಾಗಿದೆ.

ಭವ್ಯ ಸಂಸ್ಕೃತಿ ನಮ್ಮದೆಂದು ಹೇಳಿಕೊಳ್ಳುವ ಪರಿಪಾಠ ನಮ್ಮಲ್ಲಿದೆ. ಆದರೆ ನೈತಿಕವಾಗಿ ಅತ್ಯಂತ ಕೀಳು ದರ್ಜೆಯ ನಡವಳಿಕೆಯನ್ನು ತೋರುವ ಪ್ರವೃತ್ತಿಯು ದಿನನಿತ್ಯ ವ್ಯಕ್ತವಾಗುತ್ತಿರುತ್ತದೆ. ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡುವಾಗ ಅದರಲ್ಲಿರುವ ಹುಳುಕನ್ನು ನೋಡದಿರುವುದು ಒಂದು ದೊಡ್ಡ ದೌರ್ಬಲ್ಯವೇ ಸರಿ. ಇಲ್ಲಿ ಅನೈತಿಕ ನಡವಳಿಕೆಗೆ ವಿರೋಧವಿಲ್ಲ. ಹಲ್ಲೆ ನಡೆಸಿದಾಗ ಯಾವ ಶಿಕ್ಷೆ, ಪ್ರತಿಬಂಧನಗಳಿಲ್ಲ. 'ಸತಿ'ಗೆ ತಳ್ಳಿದವರು ಮಂತ್ರಿಗಳಾಗುತ್ತಾರೆ. ಸ್ವಾಮಿಗಳು ಕಾಮುಕರಾದರೂ ವಂದ್ಯರಾಗುತ್ತಾರೆ. ಗೂಂಡಾಗಳು, ಭೂಮಾಲೀಕರು, ದೊಡ್ಡ ಅಧಿಕಾರಿಗಳು ಕಾನೂನನ್ನು ಮೀರಿ ನಿಲ್ಲಬಲ್ಲವರಾಗುತ್ತಾರೆ. ನ್ಯಾಯಾಲಯ ಇವರಿಗೆ ಜಾಮೀನು ಕೊಟ್ಟರೆ ಹತ್ತು ವರ್ಷ ನಿಶ್ಚಿಂತೆಯಾಗಿ ಇರಬಹುದು, ಹಾಗೆ ಇನ್ನೂ ಹತ್ತು ದೌರ್ಜನ್ಯಗಳನ್ನು ನಡೆಸಬಹುದು. ಇಂತಹ ಸಂದರ್ಭದಲ್ಲಿ ನಮ್ಮ ಕಾನೂನು ವ್ಯವಸ್ಥೆ ಇನ್ನೂ ಹೊಲಸಾಗಿದೆ. ರಕ್ಷಣೆ ನೀಡಬೇಕಾದವರೇ ಮನಸ್ವೀ ದೌರ್ಜನ್ಯವೆಸಗುತ್ತಾರೆ. ಇಂತಹ ಸಂದರ್ಭದಲ್ಲಿ ಮಾನಸಿಕವಾಗಿ, ಬೌದ್ಧಿಕವಾಗಿ ಮತೀಯ ಕಟ್ಟುಪಾಡುಗಳನ್ನು ಕಳಚಿ ಮಹಿಳೆ ಹೊರಬರುವುದು ಅಗತ್ಯವಾಗಿದೆ. ನಿದರ್ಶನವಾಗಿ ತಾಸ್ಲಿಮಾ ನಸ್ರೀನ್ ನಮ್ಮ ಮುಂದಿದ್ದಾಳೆ. 'ಪತಿಯೇ ಪರದೈವ' ವೆಂದು ಸಾರುವ ನಮ್ಮ ಸಂಸ್ಕೃತಿಯಲ್ಲಿ ಪತ್ನಿಯು ಇಹದೈವವಾದರೂ ಆಗಬೇಡವೇ ? ಎಂದರು.

ವಕೀಲರಾದ ಶ್ರೀಮತಿ ಮಂಜುಳಾ ದೇವಿಯವರು ಮಾತನಾಡುತ್ತಾ ದೌರ್ಜನ್ಯ ವಿರೋಧಿ ವೇದಿಕೆಯ ಬೇಡಿಕೆಗಳನ್ನು ವಿವರಿಸುತ್ತಾ ಅದರ ಅಗತ್ಯವನ್ನು ಹೆಚ್ಚು ಸಮರ್ಥಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಶ್ರೀಮತಿ ಸಿ. ಶಾರದಾರವರು "ಮಹಿಳೆ ಎಚ್ಚೆತ್ತಾಗ" ಎಂಬ ಧ್ವನಿಸುರುಳಿಯನ್ನು ಬಿಡುಗಡೆ ಮಾಡಿ, ಮಹಿಳಾ ಜಾಗೃತಿಗಾಗಿ ಕರೆ ಕೊಟ್ಟರು.

★

# ಗಂಡಂದಿರೇ ಸಂಘಟಿತರಾಗಿ, ಪಡೆಯುವುದು ಸೊನ್ನೆ ಮಾತ್ರ

ದೆಹಲಿಯಲ್ಲೊಂದು "ಅಖಿಲ ಭಾರತೀಯ ಪತ್ನಿ ಅತ್ಯಾಚಾರ ವಿರೋಧಿ ಮೋರ್ಚಾ" ಎಂಬ ಸಂಘಟನೆಯೊಂದಿದೆ. ಸುಪ್ರೀಂ ಕೋರ್ಟಿನ ರಾಮ್ ಪ್ರಸಾದ್ ಚೌಘಾ ಹುಟ್ಟು ಹಾಕಿದ ಸಂಸ್ಥೆಯಿದು. 10,000 ಸದಸ್ಯರು ಈ ಸಂಸ್ಥೆಯಲ್ಲಿದ್ದಾರೆಂದು ಹೇಳಿಕೊಳ್ಳುವ ಈ ಸಂಘಟನೆಗೆ ರಾಷ್ಟ್ರಾದ್ಯಂತ 400 ಘಟಕಗಳಿವೆಯಂತೆ. ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳು, ನ್ಯಾಯಾಧಿಪತಿಗಳು, ವಕೀಲರು ಹಾಗೂ ಬುದ್ಧಿಜೀವಿಗಳು ಇದರ ಸದಸ್ಯರೆಂದು ಹೇಳಿಕೊಳ್ಳುವ ಸಂಸ್ಥೆಯ ಮುಖ್ಯ ಘೋಷಣೆ—"ವಿಶ್ವದ ಗಂಡಂದಿರೇ ಒಂದಾಗಿ, ಕಳೆದುಕೊಳ್ಳುವುದು ಹೆಚ್ಚೇನಲ್ಲ, ಹೆಂಡತಿಯರನ್ನು ಮಾತ್ರ" ಎಂಬುದಾಗಿದೆ. ಇದಕ್ಕೆ ಪತ್ರಿಕೆ, ಪ್ರಸಾರ ಮಾಧ್ಯಮಗಳ ಪ್ರಚಾರವೂ ಹೇರಳವಾಗಿದೆ. ಸಮಾಜದ ಪ್ರತಿಷ್ಠಿತರು, ಬುದ್ಧಿಜೀವಿಗಳ ಸಂಘಟನೆಯೆಂದರೆ ಖಾಲಿ ಪ್ರಚಾರಕ್ಕೆ ಏನು ಕೊರತೆ?

ಇತ್ತೀಚೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರನ್ನು ಕುರಿತು ಕೈಗೊಳ್ಳುತ್ತಿರುವ ಕೆಲವು ಕಲ್ಯಾಣ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಇಂತಹದೊಂದು ಕೂಗಿಗೆ ಇನ್ನೂ ಹೆಚ್ಚು ಪ್ರಚಾರ ಸಿಕ್ಕಿದೆ. ಶತಮಾನಗಳಿಂದ ತಮಗೆ ಬೇಕಾದ್ದನ್ನೆಲ್ಲಾ ಸಾಧಿಸಿಕೊಂಡು ಬಂದ ಪುರುಷ ಸಮುದಾಯ ತಮಗಿರುವ ವಿಪುಲವಾದ ಶಕ್ತಿಯಿಂದ ಬೊಬ್ಬೆ ಹೊಡೆಯುತ್ತಿರುವುದು, ಆ ಬೊಬ್ಬೆಯಿಂದ ತಮಗೆ ಲಾಭವಿದೆಯೆಂದು ಕಂಡುಕೊಂಡವರು ದನಿಗೂಡಿಸುತ್ತಿರುವುದೂ ಆಶ್ಚರ್ಯದ ಸಂಗತಿಯೇನಲ್ಲ. ಶತಮಾನಗಳಿಂದ ತಾವು ಅನುಭವಿಸುತ್ತಿರುವ ಸವಲತ್ತುಗಳಲ್ಲಿ ಕೊಂಚ ಅರೆಕೊರೆಯಾದರೂ ಸಹಿಸಲಾಗದ ಪುರುಷ ಸಮುದಾಯ ಹೇಗೆ ವರ್ತಿಸಬಹುದೆಂಬುದನ್ನೂ ಕಳೆದ ವರ್ಷಗಳಲ್ಲಿ ಬಿ.ಟಿ.ಎಸ್. ಹೆಣ್ಣು ಮಕ್ಕಳಿಗೆ ಸೀಟು ಮೀಸಲಿರಿಸಿದಾಗ ಕಂಡಿದ್ದೇವೆ.

ಹೆಣ್ಣಿನ ಸ್ವತಂತ್ರ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ ಪುರುಷರಿಗೆ ತನ್ನತನವನ್ನು ಸ್ಥಾಪಿಸಿಕೊಳ್ಳ ಹೊರಡುವ ಹೆಣ್ಣು ಭಯಂಕರ ಸವಾಲಾಗುತ್ತಾಳೆ. ಚಂಡಿ, ಚಾಮುಂಡಿ, ಕಾಳಿಯ ರೂಪದಲ್ಲಿ ಹೆಣ್ಣನ್ನು ಕಾಣಬಲ್ಲ ಪುರುಷರಿಗೆ ನಾರಿ ಮಾರಿಯೆನಿಸಿದರೆ ಆಶ್ಚರ್ಯವಿಲ್ಲ. "ಮುತ್ತು ಕೊಡುವವಳು ಬಂದಾಗ ತುತ್ತು ಕೊಡುವವಳನ್ನು ಮರೆಯಬೇಡ" ಎಂದು ನಂಬಿ ಪ್ರಚಾರ ಮಾಡುವ ಗಂಡಿಗೆ ತಾಯಿಯ ಮಮತೆ, ರಕ್ಷಣೆ ಅವಶ್ಯಕ ಎನಿಸಿರಬಹುದು. ಈ ಲಾಭಕೋರ ಬುದ್ಧಿಯ ಗಂಡಿಗೆ ಆಧುನಿಕ ಜಗತ್ತಿನ ಮದುವೆಯ ತಂತ್ರಗಳು, ಕ್ಲಿಷ್ಟವಾದ ಕಾನೂನಿನ ಆಚರಣೆಗಳು ಲಾಭಕರವಾಗಿ ಪರಿಗಣಿಸಿ ವಧುಗಳ ಸಂಖ್ಯೆ ಹೆಚ್ಚಿಸಿಕೊಂಡು ಸಿರಿವಂತನಾಗಬಹುದು. ಒಲ್ಲದ ಹೆಣ್ಣಿಗೆ ನೂರೆಂಟು ನೆಪಗಳು ಸಿದ್ಧವಿದೆ—ಸೊತ್ತು ತರಲಾಗದ ನಿರ್ಭಾಗ್ಯೆಯಿರಬಹುದು, ಚಾರಿತ್ರ್ಯ ಹೀನಳೆನ್ನಬಹುದು, ಸ್ವತಂತ್ರ ವ್ಯಕ್ತಿತ್ವದ ದಿಟ್ಟೆಯೆನ್ನಬಹುದು. ಪತ್ನಿಯ ಅಧೀನತೆಯನ್ನು, ನಿರ್ಬಲತೆಯನ್ನು ನಿರೀಕ್ಷಿಸುವ ಗಂಡಿಗೆ ದಾಸಿಯ ಸಾಂಗತ್ಯ ಮಾತ್ರ ಸಿಗಬಹುದು. ದಾಸಿಯಾಗದೆ ಸಂಗಾತಿಯಾಗಲು ಬರುವ ಹೆಣ್ಣಿನ ವಿರುದ್ಧ ಇಡೀ ವಿಶ್ವದ ಪುರುಷರು ಸಂಘಟಿತರಾದರೆ ನಷ್ಟ ಯಾರಿಗೂ ಇಲ್ಲ. ಹೆಂಡತಿಯನ್ನು ಕಳೆದುಕೊಂಡು ಬೀಗುವ ಈ ಗಂಡಸರು ಸಂಘಟನೆಯಿಂದ, ಹೋರಾಟದಿಂದ ಪಡೆಯುವುದು ಸೊನ್ನೆ ಮಾತ್ರ.

ಮಹಿಳಾ ಸಂಘಟನೆ, ಮಹಿಳಾ ಚಳುವಳಿಯ ಪ್ರಸ್ತಾಪ ಬಂದಾಗಲೆಲ್ಲಾ ಕೆಲವು ಸ್ತ್ರೀ–ವಿರೋಧಿ ಪುರುಷರು ಈ "ಗಂಡಂದಿರ ಸಂಘಟನೆ"ಯ ಬಗ್ಗೆ ಗಟ್ಟಿಯಾಗಿ ಮಾತನಾಡುತ್ತಾರೆ. ಜೊತೆಯಲ್ಲೇ ಮಹಿಳಾ ಸಂಘಟನೆಗೆ ಹಿರಿದಾದ ಉದ್ದೇಶ, ವಿಶಾಲ ವ್ಯಾಪ್ತಿ ಹಾಗೂ ತಾತ್ವಿಕ ಸ್ಪಷ್ಟತೆಯಿದೆಯೆಂಬುದನ್ನೂ ಮರೆಯುತ್ತಾರೆ. ಮಹಿಳಾ ಸಂಘಟನೆ ಕೇವಲ ಹೆಂಡತಿಯರ, ಅಥವಾ ತಾಯಿಯರ ಇಲ್ಲವೇ ಅತ್ತೆಯರ ಸಂಘಟನೆಯಲ್ಲ. ಪುರುಷ ಪ್ರಾಧಾನ್ಯತೆಯ ಸಮಾಜ ಬದಲಾಯಿಸಿ, ಸ್ತ್ರೀ–ಪುರುಷರ ಸಮಾನತೆಯ ಗೀತೆ ಬರೆಯುವ ಹಾದಿಯಲ್ಲಿ ಮಹಿಳೆಯರ ಸಂಘಟನೆ ನಡೆದಿದೆ. ಅವರಿಗೆ ತಮ್ಮ ಶತ್ರು ಯಾರು ಎಂಬುದು ಗೊತ್ತಿದೆ. ಈ ಶತ್ರುವಿನ ಹೋರಾಟಕ್ಕೆ ಸಮಾನ ಮನಸ್ಕ ಪುರುಷರ ಬೆಂಬಲ ಕೂಡ ಪಡೆಯುತ್ತಾರೆ. ಇದು ಮೇಲ್ನೋಟಕ್ಕೆ ಲಿಂಗಾಧಾರಿತ ಅಸಮಾನತೆಯನ್ನು ಹೊಡೆದೋಡಿಸಲು ಸಮಾಜದ ಎಲ್ಲ ವರ್ಗಗಳ ಜನರೂ ಒಂದಾಗಿ ಹೋರಾಡುವ ಪ್ರಯತ್ನವಿದು. ಆದ್ದರಿಂದಲೇ ವಿಶ್ವದ ಮಹಿಳೆಯರು ಒಂದಾದರೆ ತಮ್ಮ ಶತಮಾನಗಳ ದಾಸ್ಯವನ್ನು ಕಳೆದುಕೊಂಡು ಸ್ವಾತಂತ್ರ್ಯವನ್ನು ಪಡೆಯುತ್ತಾರೆ. ಬಿಡುಗಡೆಯ ಹಾದಿಯತ್ತ ನಡೆದ ಮಹಿಳೆಗೆ ಗಂಡಂದಿರ ಸಂಘಟನೆಯು ಬೆದರಿಕೆಯೇನಲ್ಲ. ಆದ್ದರಿಂದ "ಗಂಡಂದಿರೇ ಎಚ್ಚರಾಗಿ, ನಿಮ್ಮ ಹೋರಾಟದಿಂದ ನೀವು ಪಡೆಯುವುದು ಸೊನ್ನೆ ಮಾತ್ರ" !

"ಕೋಮುವಾದ ಹಾಗೂ ಧಾರ್ಮಿಕ ಮೂಲಭೂತವಾದವನ್ನು ನಾನು ವಿರೋಧಿಸುತ್ತೇನೆ. 1992ರ ಡಿಸೆಂಬರ್ 6ರಂದು ಬಾಬರಿ ಮಸೀದಿಯನ್ನು ಅಯೋಧ್ಯೆಯಲ್ಲಿ ಉರುಳಿಸಿದ ನಂತರ ನಾನು 'ಲಜ್ಜಾ' ಬರೆದುದು ಇದೇ ಕಾರಣಕ್ಕಾಗಿ. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾದ ಹಿಂದೂಗಳ ಮೇಲೆ ಬಹು ಸಂಖ್ಯಾತರಾದ ಕೆಲವು ಮುಸ್ಲಿಮರು ನಡೆಸಿದ ಹಲ್ಲೆಯನ್ನು ಕುರಿತಾದ ಈ ಪುಸ್ತಕವನ್ನು ರಚಿಸಲು ನಾನು ಏಳು ದಿನಗಳನ್ನು ತೆಗೆದುಕೊಂಡೆ. ಬಾಬರಿ ಮಸೀದಿಯು ಉರುಳಿದ ನಂತರ ನನ್ನ ದೇಶದಲ್ಲಿರುವ ಹಿಂದೂಗಳನ್ನು ಬೆನ್ನಟ್ಟಿ ಹೋಗಿ ಹೊಡೆದದ್ದು ನನಗೆ ಅವಮಾನದ ವಿಷಯವೆನಿಸುತ್ತದೆ. ಬಾಂಗ್ಲಾ ದೇಶವನ್ನು ಪ್ರೀತಿಸುವ ನಮಗೆಲ್ಲಾ, ಇಂತಹ ಸುಂದರ ದೇಶದಲ್ಲಿ ಇಂತಹ ಭಯಾನಕ ಕೃತ್ಯಗಳು ನಾಚಿಕೆಯುಂಟುಮಾಡುತ್ತವೆ. 1992ರಲ್ಲಿ ಬಾಂಗ್ಲಾ ದೇಶದಲ್ಲಿ ನಡೆದ ಕೊಲೆ, ಲೂಟಿಗಳಿಗೆ ನಾವೆಲ್ಲರೂ ಜವಾಬ್ದಾರರು, ನಿಂದನೆಗೆ ಅರ್ಹರು. 'ಲಜ್ಜಾ' ನಮ್ಮೆಲ್ಲರ ಸಾಮೂಹಿಕ ಸೋಲಿನ ದಾಖಲೆ.

ಧಾರ್ಮಿಕ ಮೂಲಭೂತವಾದಿತನದ ರೋಗ ಬಾಂಗ್ಲಾ ದೇಶಕ್ಕೆ ಮಾತ್ರ ಸೀಮಿತವಲ್ಲ ಮತ್ತು ಅದನ್ನು ಎಲ್ಲ ಹಂತದಲ್ಲೂ ವಿರೋಧಿಸಬೇಕಾಗಿದೆ. ನಾನು ಈ ಸವಾಲನ್ನು ಎದುರಿಸಲಾಗಲೀ, ನನ್ನ ಜೀವಕ್ಕೆ ಬೆದರಿಕೆಯೊಡ್ಡಿದರಾಗಲೀ ಎಳ್ಳಷ್ಟೂ ಹೆದರುವುದಿಲ್ಲ. ನನ್ನ ಬರವಣಿಗೆಯನ್ನೂ ಹೀಗೆಯೇ ಕೊಲೆ, ಸುಲಿಗೆಯ ವಿರುದ್ಧ, ತಾರತಮ್ಯದ ವಿರುದ್ಧ ಮುಂದುವರಿಸುತ್ತೇನೆ. ಈ ಮೂಲಭೂತವಾದಿ ಮೌಲ್ಯಗಳನ್ನು ತಡೆಗಟ್ಟಲು, ಮಾನವೀಯತೆ ಮತ್ತು ಧರ್ಮ ನಿರಪೇಕ್ಷತೆಯಲ್ಲಿ ನಂಬಿಕೆಯಿಟ್ಟ ನಾವೆಲ್ಲರೂ ಒಂದಾಗಿ ಅವುಗಳ ದುಷ್ಪರಿಣಾಮದ ವಿರುದ್ಧ ಹೋರಾಡಬೇಕೆಂಬುದರ ಬಗ್ಗೆ ನಾನು ದೃಢವಾಗಿ ವಿಶ್ವಾಸವಿಟ್ಟಿದ್ದೇನೆ. ನಾನು ಒಬ್ಬಳೇ ಆದರೂ ಯಾರೂ ನನ್ನ ದನಿಯಡಗಿಸಲು ಸಾಧ್ಯವಿಲ್ಲ."

— 'ಲಜ್ಜಾ' ಕಾದಂಬರಿಯ ಮುನ್ನುಡಿಯಿಂದ

*Reg No. MAG (5) PRC, DEGL 036/89/87*
BOOK-POST/Periodicals

*To*

*If undelivered please return to :*
**Jagruthi Mahila Adhyayana Kendra**
401, Vijay Tower, 2nd Main, RPC Layout
Vijayanagar, II Stage, Bangalore-560 040